ಮುಖ್ಯಮಂತ್ರಿಗಳು ಶಾಸಕರನ್ನು ಬ್ರಿಗೇಡ್ ರೋಡ್‌ಗೆ ಹೋಗುತ್ತಿದ್ದಾರೆನ್ನಲಾದ ಬಗ್ಗೆ ಹಕ್ಕು ಚ್ಯುತಿ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಮುಖ್ಯಮಂತ್ರಿಯವರು ಇತ್ತೀಚೆಗೆ ಏಕೋ ಬಹಳ ತಪ್ಪಾಗಿ ಮಾತನಾಡುವುದನ್ನು ಅಭ್ಯಾಸ ಮಾಡಿ ಕೊಂಡಿದ್ದಾರೆ. ಲೆಜಿಸ್ಲೇಟರ್ಸ್ ಅಂದರೆ ಬಹಳ ಹಗುರವಾಗಿ ಕಾಣುವುದು, ಬಹಳ ಹಗುರವಾಗಿ ಅವರ ಬಗ್ಗೆ ಮಾತನಾಡುವುದು, ಅವರು ಏನೂ ಪ್ರಯೋಜನ ಇಲ್ಲ ಎನ್ನುವ ಹಾಗೆ ಮಾತನಾಡುವುದು ಇತ್ಯಾದಿಯಾಗಿ ಅಭ್ಯಾಸ ಮಾಡಿಕೊಂಡಿದ್ದಾರೆ. ಮೊನ್ನೆ ಏಪ್ರಿಲ್ ೨೪ ರಂದು ಮುಖ್ಯಮಂತ್ರಿಗಳು ಮಾತನಾಡುತ್ತಾ Th Hon'ble Chief Minister has said that these legislators have mad: Legislators "Home and Brigade Road as thier home instead of going to thier Constituencies......" ಎಂದು ಹೇಳಿದರು. ಇದನ್ನು ಮಾನ್ಯ ದೇವೇಗೌಡರು ರಿಟಾರ್ಟ್ ಮಾಡಿ ಇದು ತಪ್ಪು ಎಂದು ಹೇಳಿದರು ಹೀಗೆ ಅಂದರೆ ಅದರ ಅರ್ಥ ಏನು ? ಹಾಗಾದರೆ ಶಾಸಕರು ಶಾಸಕರ ಭವನ ಬಿಟ್ಟು ಎಲ್ಲಿಗೂ ಹೋಗಬಾರದೆ ? ಲೆಜಿಸ್ಲೇಟರ್ಸ್ ಎಲ್ಲರೂ ಕಳ್ಳರು, ಸುಳ್ಳರು, ಕರೆಪ್ಟಿವ್ ಇರುತ್ತಾರೆಯೋ ಎಂದು ಹೇಳಿದರು. ಮುಖ್ಯಮಂತ್ರಿಯವರು ಶಾಸಕರು ಯಾವಾಗಲೂ ಬ್ರಿಗೇಡ್ ರೋಡ್‌ನಲ್ಲಿ ತಿರುಗಾಡುತ್ತಾ ಇರುತ್ತಾರೆ ಎಂದು ಹೇಳಿದ್ದಾರೆ. ಬ್ರಿಗೇಡ್ ರೋಡ್‌ನಲ್ಲಿ ವಿಶೇಷ ಜಾಸ್ತಿ ಇದೆಯೋ ಏನೋ ಎಂಬುದು ನನಗಂತೂ ಗೊತ್ತಿಲ್ಲ. ಅಲ್ಲಿ ಕ್ಲಬ್, ಕ್ಯಾಬರೇ, ಜಾಸ್ತಿ ಇರಬಹುದು, ಇವರೆಲ್ಲರೂ ಅಲ್ಲಿಯೇ ಇರುತ್ತಾರೆ ಎಂಬ ಅರ್ಥದಲ್ಲಿ ಹೇಳಿದರು. ಹಾಗೆಯೇ ಎಲ್. ಹೆಚ್. ನಲ್ಲಿ ಒಂದೊಂದು ರೂಮ್ ಕೂಡ ಕ್ಲಬ್ ಆಗಿ ಹೋಗುತ್ತಾ ಇದೆ, ಅಲ್ಲಿ ಕಾರ್ಡ್ಸ್ ಆಡುತ್ತಾ ಇರುತ್ತಾರೆ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಈ ಲೆಜಿಸ್ಲೇಟರ್ಸ್ ತಮ್ಮ ಕ್ಷೇತ್ರಕ್ಕೆ ಹೋಗುವುದಿಲ್ಲ. ಅಲ್ಲಿಯೇ ಇರುತ್ತಾರೆ ಎಂಬ ಒಂದು ಭಾವನೆ ಜನರಲ್ಲಿ ಬರುತ್ತದೆ. ಹಾಗೆ ಹೇಳಿದ್ದರಲ್ಲಿ ಜನರಲ್ಲಿ ಯಾವ ಒಂದು ಭಾವನೆ ಬರುತ್ತದೆ ಎಂದು ನಾವು ತಿಳಿದುಕೊಳ್ಳಬೇಕಾಗಿತ್ತು. ಎಲ್ಲರೂ ಒಂದೇ ತರಹದಲ್ಲಿ ಇರುವುದಿಲ್ಲ. ನಾವೆಲ್ಲಾ ಮರ್ಯಾದಸ್ತರು. ನಾವೂ ಕೂಡ ಬ್ರಿಗೇಡ್ ರೋಡ್‌ಗೆ ಅಂಗಡಿಗಳಿಗೆ ಹೋಗುತ್ತೇವೆ. ಚಪ್ಪಲಿ ಅಂಗಡಿಗೆ ಹೋಗಿ ಚಪ್ಪಲಿ ತರುತ್ತೇವೆ, ನೀಲ ಗಿರೀಸ್ ಅಂಗಡಿಗೆ ಹೋಗಿ ಕೇಕ್, ಬನ್, ಅಥವಾ ನಮಗೆ ಬೇಕಾದ ವಸ್ತುಗಳನ್ನು ತರುತ್ತೇವೆ. ಹಾಗಾದರೆ ಬ್ರಿಗೇಡ್ ರೋಡ್‌ಗೆ ಹೋಗಬಾರದೆ ? ಎಲ್ಲಾ ಲೆಜಿಸ್ಲೇಟರ್ಸ್ ಅಲೆದಾಡುತ್ತಾ ಇರುತ್ತಾರೆ, ಅವರ ಮೇಲೆ ಕಂಟ್ರೋಲ್ ಇಲ್ಲ. ಅವರಿಗೆ ಬುದ್ಧಿ ಇಲ್ಲ ಎಂದು ಹೇಳಿದರೆ, ಇದರ ಪರಿಣಾಮ ಸಾಮಾನ್ಯ ಮನುಷ್ಯನ ಮೇಲೆ ಏನಾಗಬಹುದು ? ಈ ಶಾಸಕರಿಗೆ ಕೆಲಸವೇ ಇಲ್ಲ ಎಂದು ಕಾಣುತ್ತದೆ ಎಂಬ ಭಾವನೆಯು ಜನರಲ್ಲಿ ಬರುವುದಲ್ಲದೆ, ನಮ್ಮನ್ನು ನೋಡಿದ ಜನರು ನಮ್ಮನ್ನು ಗೇಲಿ ಮಾಡುವ ಪ್ರಸಂಗ ಬರುತ್ತದೆ. ಆದ್ದರಿಂದ ಶಾಸಕರ ಹಕ್ಕುಬಾಧ್ಯತೆಗಳಿಗೆ ಚ್ಯುತಿಯಾಗುವ ಮಾತನ್ನು ಚೀಫ್ ಮಿನಿಸ್ಟ್ರು ಆಡಿರುವುದರಿಂದ ಅದು ಪೇಪರ್‌ನಲ್ಲಿ ಬಂದಿರುವುದರಿಂದ ನೀವು ಅವರನ್ನು ಕರೆಸಿ ಅವರು ಏನು ಹೇಳುತ್ತಾರೋ ಅದನ್ನು ಕೇಳಿ ಸಮಜಾಯಿಸಿ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ನಮ್ಮ ಶಾಸಕರ ಘನತೆ ಗೌರವ ಕಳೆಯುವ ರೀತಿಯಲ್ಲಿ ಮಾತನಾಡಿದ್ದಾರೆ ಮತ್ತು ಅವರ ಪ್ರೆಸ್ ಸ್ಟೇಟ್‌ಮೆಂಟ್ ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್ ಎಲ್ಲಾ ಕಡೆ ಬಂದಿದೆ ಅಂದರೆ ಶಾಸಕರೆಲ್ಲರೂ ಬ್ರಿಗೇಡ್ ರೋಡ್‌ನಲ್ಲಿ ಅಡ್ಡಾಡುತ್ತಿದ್ದಾರೆಂದೂ ಲೆಜಿಸ್ಲೇಟರ್ ಹೋಮ್‌ನ್ನು ತಮ್ಮ ಮನೆಯನ್ನು ಮಾಡಿಕೊಂಡಿದ್ದಾರೆಂದು ಇವರು ಯಾವ ಕೆಲಸ ಕಾರ್ಯಗಳನ್ನೂ ಮಾಡುತ್ತಿಲ್ಲವೆಂದೂ ಹೇಳಿರುವುದರಿಂದ ಈಗ ಶಾಸಕರು ತಮ್ಮ ಕ್ಷೇತ್ರಗಳಿಗೆ ಹೋದರೆ ಜನ ಅವರನ್ನು ಸಂಶಯದಿಂದ ನೋಡುತ್ತಿದ್ದಾರೆ. ಮುಖ್ಯಮಂತ್ರಿಗಳೇ ಹೀಗೆ ಹೇಳುವಾಗ ಅವರು ಈ ಸದನದ ಲೀಡರಾಗಿ ಯಾವುದೇ ಮಾತನ್ನು ಆಡಿದರೂ ಅದರ ಪರಿಣಾಮ ಪ್ರಭಾವಗಳು ಜನತೆಯ ಮೇಲೆ ಬೀಳುತ್ತವೆ ಅವರು ಈ ರಾಜ್ಯದ ಭಾರವನ್ನು ಹೊತ್ತುಕೊಂಡಿದ್ದಾರೆ ಅವರೇ ಇಂಥ ಮಾತನ್ನು ಆಡಿರಬೇಕಾದರೆ ನಿಜವಾಗಿಯೂ ಇದರಲ್ಲಿ ಏನೋ ನಿಜಾಂಶ ಇರಬೇಕು ಎಲ್ಲಾ ಶಾಸಕರೂ ಈ ರೀತಿ ಮಾಡಿರಬೇಕೆಂಬ ಕಲ್ಪನೆ ಜನರಲ್ಲಿ ಬರುತ್ತದೆ. ಹೀಗಾಗಿ ಹಿಂದೆ ಇದಿನಬ್ಬ ಅವರು ಒಂದು ಪ್ರಶ್ನೆ ಕೇಳಿ ಆಟೋರಿಕ್ಷಾದವರು ಲೆಜಿಸ್ಲೇಟರ್ಸ್ ಹೋಮ್‌ಗೆಂದರೆ ಬರುವುದಿಲ್ಲ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ಹೇಳುವುದು ಸರಿಯಲ್ಲ, ಅದು ಶಾಸಕರಿಗೆ ಅವಮಾನ ಮಾಡುವಂಥಾದ್ದು ಎಂದು ಹೇಳಿದ್ದರು.

ಶ್ರೀ ಎ. ಲಕ್ಷ್ಮೀಸಾಗರ್.—ಮುಖ್ಯಮಂತ್ರಿಗಳು ಉಪಯೋಗಿಸದೇ ಇರುವ ಶಬ್ದವನ್ನು ಅವರ ಬಾಯಲ್ಲಿ ಇವರು ಆರೋಪ ಮಾಡುತ್ತಿದ್ದಾರೆ ಫ್ಯಾಕ್ಟ್ಸ್ ಹೆಚ್ಚೂಕಡಿಮೆ ಆಗಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳುವುದನ್ನು ಕೇಳಿ ಆಮೇಲೆ ಮಾತನಾಡಿ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ಹೇಳಲಿಲ್ಲ ಎಂದು ಹೇಳುತ್ತಿದ್ದಾರೆ ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಮಾತನ್ನು ಹೇಳಬೇಡಿ ಅದರಿಂದ ಲೆಜಿಸ್ಲೇಟರ್ಸ್‌ಗೆ ಅವಮಾನವಾಗುತ್ತದೆಂದು ಹೇಳಿದ್ದು ನಿಜ ಅವರು ಆ ಅರ್ಥದಲ್ಲಿ ಹೇಳಿದರು. ಅಂದಾಗ ನಾನು ಕೇಳುವುದು ಇಷ್ಟೆ ಇದಿನಬ್ಬರು ಹೇಳುವುದೇ ಅಪರಾಧವಾದರೆ ಈಗ ಮುಖ್ಯಮಂತ್ರಿಗಳು ಅಡಿರುವುದಕ್ಕೆ ಯಾವ ಶಿಕ್ಷೆ ? ಇದಾದ ಮೇಲೆ ಮಾನ್ಯ ದೇವೇಗೌಡರು ಕುಣಿಗಲ್‌ನಲ್ಲಿ ಅನೇಕ ಶಾಸಕರನ್ನು ತೋರಿಸಿ ಹೆಗಡೆಯವರು ಇದೇ ಶಾಸಕರನ್ನು ಬ್ರಿಗೇಡ್ ರೋಡ್ ಶಾಸಕರೆಂದು ಕರೆದಿದ್ದು ಎಂದಿದ್ದಾರೆ. ಇದರಿಂದ ಎಲ್ಲಾ ಶಾಸಕರ ಘನತೆ ಗೌರವಗಳಿಗೆ ಚ್ಯುತಿ ಬಂದಿದೆ.

ಅವರು ಆ ರೀತಿಯು ಹೇಳಿಕೆ ನೀಡಿದ ಮೇಲೆ ಜನ ಸಂಶಯ ದೃಷ್ಟಿಯಿಂದ ನಮ್ಮ ಕಡೆ ನೋಡುತ್ತಿದ್ದಾರೆ. ನಮಗೆ ಗೌರವ ಕೊಡತಕ್ಕಂಥಾದ್ದು ಅಥವಾ ನಮಗೆ ಏನು ರೆಸ್ಪೆಕ್ಟ್ ಇತ್ತು ಅದನ್ನು ಮಾನ್ಯ ಮುಖ್ಯ ಮಂತ್ರಿಗಳಾಗಿ ಅವರು ಕಳೆದಿದ್ದಾರೆ ಈ ಸದನದ ಮುಖಾಂತರವಾಗಿ ಈ ಸದನದ ಲೀಡರ್ ಆಗಿ ಅವರೇ ಶಾಸಕರ ಘನತೆ ಗೌರವಕ್ಕೆ ಚ್ಯುತಿ ತಂದಿದ್ದಾರೆ. ಅದಕ್ಕಾಗಿ ನಾವು ಇದನ್ನು ಇಲ್ಲಿ ಚರ್ಚೆ ಮಾಡಬೇಕೆಂದು ತಂದಿದ್ದೇವೆ. ಕೌಲ್ ಅಂಡ್ ಶಕ್‌ದರ್‌ನ ೧೭೭ನೇ ಪೇಜ್‌ನಲ್ಲಿ ಏನು ಹೇಳಿದ್ದಾರೆ ಅದನ್ನು ನಾನು ಇಲ್ಲಿ ಓದುತ್ತೇನೆ.

In Kaul and Shakdher, (page 177), it has been stated thus.

"The object of parliamentary privileges is to safeguard the freedom, the authority and the dignity of parliament. Privileges are necessary for the proper exercise of the functions entrusted to parliament by the Constitution. They are enjoyed by individual members because the House cannot perform the functions without unimpeded use of the services of the members and by each House collectively of its own authority and dignity. In modern times, parliamentary privileges has to be viewed from a different angle than in the earlier days of the struggle of freedom against the executive authority. Privilage at that time was regarded as a protection of the Members of Parliament against the executive authority not responsible to parliament. The entire background in which privileges of porliament are now viewed has changed because the executive is now responsible to parliament. The foundation upon which they rest is the maintenance of dignity and independence of the House and of its members."

ಎಂದು ಇದೆ. ಅದರಲ್ಲಿರುವ ಪೇಜ್ ೭೮ರ ಕೊನೇ ಪ್ಯಾರವನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಯಾವ ಸಂದರ್ಭದಲ್ಲಿ ಯಾವ ರೀತಿಯಾಗಿ ಸದನದ ಸದಸ್ಯರು ಅವರ ಘನತೆ ಗೌರವವನ್ನು ನೋಡಿಕೊಳ್ಳಬೇಕು ಎಂಬುದರ ಬಗ್ಗೆ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಇದನ್ನು ಹೇಳಿದ್ದು ಮತ್ತೆ ಇದನ್ನು ಹೌಸ್ ಆಫ್ ಕಾಮನ್ಸ್‌ನಲ್ಲಿ ಕೋಟ್ ಮಾಡಿದ್ದುದು ಇದೆ ಇದನ್ನು ತಮ್ಮ ಗಮನಕ್ಕೆ ತರುತ್ತೇನೆ.

"Each House is the guardian of its own privileges. It is not only the sole judge of any matter that may arise which

in any way infringes upon those privileges but can if it deems advisable, punish either by punishment or reprimand......"

ಎಂದು ಇದೆ. ಪನಿಷ್‌ಮೆಂಟ್ ಯಾವ ರೀತಿಯಾಗಿ ಕೊಡಬೇಕೆಂದು ಮುಂದೆ ಇದೆ. ಈ ರೀತಿಯಾಗಿ ಸದನದ ಘನತೆ ಗೌರವವನ್ನು ಕುಂದಿಸಿದರೆ ನಾಳೆ ಮುಖ್ಯ ಮಂತ್ರಿಗಳಿಗೆ ಕೂಡ ಏನು ಗೌರವ ಬರುತ್ತದೆ? ಇವತ್ತು ಶಾಸಕರು ಎಲ್ಲಿ ಹೋದರೂ ಕೂಡ ಅವರಿಗೆ ಗೌರವ ಸಿಗುತ್ತಿಲ್ಲ ನಮ್ಮ ಸದನದ ಲೀಡರ್ರೇ ಈ ರೀತಿ ಹೀಯಾಳಿಸಿ ಮಾತನಾಡಿದರೆ ಶಾಸಕರಿಗೆ ಗೌರವ ಸಿಗುತ್ತದೆಯೇ? ಎಂಬುದನ್ನು ಯೋಚನೆ ಮಾಡಬೇಕು. ಮೊನ್ನೆ ಶಿಡ್ಲಘಟ್ಟಕ್ಕೆ ಶಾಸಕರು ಹೋದಾಗ ಅವರಿಗೆ ಹೊಡೆದರು ಹಿಂದೊಮ್ಮೆ ಮಾನ್ಯ ಮುಖ್ಯ ಮಂತ್ರಿಗಳು ಭದ್ರಾವತಿಗೆ ಹೋದರೆ ಅಲ್ಲಿ ಕಲ್ಲನ್ನು ಎಸೆದರು ಅನೇಕ ಮಂತ್ರಿಗಳಿಗೂ ಅದೇ ರೀತಿಯಾಗಿದೆ ಮೊನ್ನೆ ಸೈಫಂಡರಿ ಗ್ರ್ಯಾಜುಯೇಟ್ಸ್ ಬಗ್ಗೆ ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಗಲಾಟೆಯಾಯಿತು. ಶಾಸಕರು ಅಂದರೆ ಏನೂ ಇಲ್ಲದಂತಾಗಿದೆ ಜನತೆಯ ಕಣ್ಣಿನಲ್ಲಿ ಆ ರೀತಿ ಮಾಡಬೇಕಾದರೆ ಈ ಸದನದ ಮುಖ್ಯಸ್ಥರು ಲೀಡರ್ ಏನು ಇದ್ದಾರೆ ಅವರು ಕಾರಣರು ಎನ್ನತಕ್ಕಂತಹ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕಾಗಿ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳು ಯಾವಾಗ ಈ ಮಾತನ್ನು ಆಡಿ ನಮ್ಮ ಕರ್ನಾಟಕದ ಶಾಸಕರು ಬರೀ ಬ್ರಿಗೆಡ್ ರೋಡಿನಲ್ಲಿ ಓಡಾಡುತ್ತಿದ್ದಾರೆ, ಕ್ಯಾರೆಕ್ಟರ್ ಲೆಸ್‌ಫೆಲೋಸ್ ಅನ್ನತಕ್ಕಂತಹ ಅಭಿಪ್ರಾಯವನ್ನು ಕೊಟ್ಟಿದ್ದಾರೆ, ನಿಜ ಶಾಸಕರು ಕುಡಿಯುತ್ತಾರೆ, ಕ್ಯಾಬರೆ ನೋಡುತ್ತಾರೆ, ಡ್ಯಾನ್ಸ್ ನೋಡುತ್ತಾರೆ ಎನ್ನುವ ಮಟ್ಟಕ್ಕೆ ನಮ್ಮನ್ನು ತಂದು ಇಟ್ಟಿದ್ದಾರೆ. ತಾವು ಈ ಮನೆಯ ಸುಪ್ರೀಂ ಅಥಾರಿಟಿ ತಮಗೆ ನಿರ್ಣಯ ಕೊಡತಕ್ಕಂಥಾದ್ದು ಚೀಮಾರಿ ಹಾಕತಕ್ಕಂಥಾದ್ದು ಅಪಾಲಜಿ ಕೇಳತಕ್ಕಂತಹ ಅಜ್ಞೆ, ಹಕ್ಕು ಇದೆ. ನಾನು ತಮ್ಮನ್ನು ಕೇಳುತ್ತಿದ್ದೇನೆ ಮಾನ್ಯ ಮುಖ್ಯ ಮಂತ್ರಿಯವರು ಇದಕ್ಕೋಸ್ಕರ ಅನ್ ಕಂಡೀಷನಲ್ ಅಪಾಲಜಿ ಕೇಳಬೇಕು ಮತ್ತು ಮುಂದೆ ಇಂತಹ ಸ್ಟೇಟ್‌ಮೆಂಟ್ ಅನ್ನು ಮಾಡಬಾರದು ಎಂದು ಇದು ನನ್ನ ಒಬ್ಬನ ಪ್ರಶ್ನೆ ಅಲ್ಲ ಇಡೀ ಸದನದಲ್ಲಿರತಕ್ಕಂತಹ ಶಾಸಕರ ಪ್ರಶ್ನೆ ಇದಾಗಿದೆ ತಾವೂ ಕೂಡ ಮೊದಲು ಶಾಸಕರು ಆಮೇಲೆ ಸ್ಪೀಕರ್ ಇಷ್ಟು ಹಗುರವಾಗಿ ಮಾತನಾಡಿಕೊಂಡು ಹೋದರೆ, ನಾಳೆ ಏನಾಗುತ್ತದೆಂದರೆ ನಾವು ನಮ್ಮ ಹಳ್ಳಿಗೆ ಹೋದರೆ ಒಬ್ಬ ವಿಲೇಜ್ ಅಕೌಂಟೆಂಟ್ ಕೂಡ ನಮಗೆ ರಸ್ಪೆಕ್ಟ್ ಕೊಡುವುದಿಲ್ಲ. ನಮ್ಮನ್ನು ತಾಲ್ಲೂಕು ಪಂಚಾಯತಿ ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಜಿಲ್ಲಾ ಪರಿಷತ್ತಿನ ಸದಸ್ಯರಾಗಿ ನಾವು ಕೆಲಸ ಮಾಡುತ್ತಿದ್ದೇವೆ ಇನ್ನೂ ಅನೇಕ ಸಮಿತಿಗಳಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮಗತಿ. ಈ ರೀತಿಯಾದರೆ ಅವರು ನಮ್ಮನ್ನು ಯಾವ ದೃಷ್ಟಿಯಿಂದ ನೋಡುತ್ತಾರೆಂದು ನೀವೇ ಹೇಳಿ ಅವರು ಏನು ಹೇಳುತ್ತಾರೆ? ನಾಳೆ ಏನಾದರೂ ನಾವು ಮೀಟಿಂಗ್ ಕರೆದರೆ ಅವರು ನಮ್ಮಗಳ ಬಗ್ಗೆ ನಮ್ಮ ಕಿಮ್ಮತ್ತಿನ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ? ಈಗಾಗಲೇ ಈ ಶಾಸಕರುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ, ಬ್ರಿಗೇಡ್ ರೋಡ್‌ನಲ್ಲಿ ಅಡ್ಡಾಡುವವರನ್ನು ಅವರ ಮಾತಿಗೆ ಏನು ಕಿಮ್ಮತ್ತು ಇದೆ? ಎಂದು ತಿಳಿದುಕೊಳ್ಳುತ್ತಾರೆ ಆ ಕಿಮ್ಮತ್ತನ್ನು ಕಳೆಯತಕ್ಕಂಥ ಕೆಲಸವನ್ನು ನಮ್ಮ ಸದನದ ಮುಖಂಡರಾದ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಆದ್ದರಿಂದ ಅವರು ಅನ್-ಕಂಡೀಷನಲ್ ಅಪಾಲಜಿ ಕೇಳಬೇಕು, ಮುಂದೆ ಇದರ ಬಗ್ಗೆ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

MR. SPEAKER.—I have al'owed Mr. Moily to speak.

ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕಿಯವರು ಬಹಳ ಪ್ರಾಮುಖ್ಯವಾದ ಒಂದು ವಿಚಾರವನ್ನು ಎತ್ತಿದ್ದಾರೆ. ನಾವು ಈ ಬಗ್ಗೆ ನಾಲ್ಕೈದು ದಿವಸದ ಹಿಂದೆ ಸೂಚನೆಯನ್ನು ತಮಗೆ ಕಳುಹಿಸಿ ಕೊಟ್ಟಿದ್ದೆವು. ಆದರೆ ಸೌಜನ್ಯಪೂರ್ವಕವಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಇರುವಾಗಲೇ ಈ ಪ್ರಸ್ತಾಪವನ್ನು ಮಾಡಬೇಕು, ಇದು ಒಂದು ಸಂಸದೀಯ ರೀತಿ ಅಥವಾ ವಿಧಾನಸಭೆಯ ಒಂದು ಪರಂಪರೆ ಎಂಬ ಉದ್ದೇಶದಿಂದ ನಾವು ಒತ್ತಾಯ ಮಾಡಲಿಕ್ಕೆ ಹೋಗಲಿಲ್ಲ. ಇವತ್ತು ತಾವು ಅದಕ್ಕೆ ಆದೇಶವನ್ನು ಕೊಟ್ಟಿದ್ದೀರಿ, ಆ ವಿಷಯ ಎತ್ತಲಿಕ್ಕೆ ತಾವು ಅನುಮತಿಯನ್ನು ಕೊಡಾ ಕೊಟ್ಟಿದ್ದೀರಿ. ಬಹುಶಃ ಈ ವಿಚಾರ ಪತ್ರಿಕೆಗಳಲ್ಲಿ ಬಹಳ ಹಿಂದೆಯೇ ಪ್ರಕಟವಾಗಿತ್ತು, ಅಂದರೆ ಏಪ್ರಿಲ್ ೨೧ನೇ ತಾರೀಖು ಅನೇಕ ಪ್ರಮುಖವಾದಂಥ ಪತ್ರಿಕೆಗಳಲ್ಲಿ

ಪ್ರಕಟಣೆಯಾಗಿತ್ತು. ಬಹುಶಃ ನಾವು ಇದನ್ನು ಯಾರೂ ಸೂಚನೆಯನ್ನು ಕೊಡದೇ ಈ ಸದನದ ಮತ್ತು ಸದನದ ಪರಂಪರೆಗಳ ಒಂದು ಕಸ್ಟೋಡಿಯನ್ ಆದ ತಾವು ಈ ವಿಚಾರದಲ್ಲಿ ಪ್ರವೇಶವನ್ನು ಮಾಡುತ್ತೀರಿ ಎಂದು ಹೇಳಿ ನಾವು ನಿರೀಕ್ಷೆ ಮಾಡಿದ್ದೆವು ಏಕೆಂದು ಈ ವಿಚಾರವನ್ನು ವಿರೋಧ ಪಕ್ಷದಿಂದ ಎತ್ತಬೇಕು ಅದಕ್ಕೆ ಅವರು ಉತ್ತರ ಕೊಡಬೇಕು. ಎನ್ನತಕ್ಕಂಥ ಒಂದು ಚರ್ಚೆಯ ವಸ್ತು ಕೂಡಾ ಇದು ಆಗತಕ್ಕಂಥದ್ದಲ್ಲ. ಇದರ ಬಗ್ಗೆ ತಾವು ಈ ಪರಂಪರೆಗಳ ಒಂದು ಪ್ರಿಸೈಡಿಂಗ್ ಡೇಟಿ ಆಗಿ ಈ ವಿಚಾರವನ್ನು ಎತ್ತಿ ಆ ಕಡೆ ಇರಬಹುದು ಅಥವಾ ಈ ಕಡೆ ಇರಬಹುದು. ಎಲ್ಲಾ ಸದಸ್ಯರ ಘನತೆಯನ್ನು ಎತ್ತಿ ಹಿಡಿಯುವುದು ಮಾತ್ರವಲ್ಲ, ಮುಂದೆ ಬರತಕ್ಕಂಥ ಸದಸ್ಯರ ಘನತೆಯನ್ನು ಎತ್ತಿ ಹಿಡಿಯುವುದೂ ಅಲ್ಲ. ಏನು ಈ ಶಾಸಕಾಂಗ ಸಂಸ್ಥೆ ಈ ಇನ್‌ಸ್ಟಿಟ್ಯೂಷನ್ ಏನು ಇದೆ, ಅದರ ಮೇಲೆ ಸಾರ್ವಜನಿಕರಿಗೆ ಯಾವುದೇ ರೀತಿಯಾದಂಥ ಸಂಶಯ ಶಂಕೆ ಬಾಧಿಸದೇ ಇರತಕ್ಕಂಥ ರೀತಿಯಲ್ಲಿ ಕಾಪಾಡಿಕೊಳ್ಳಲಿಕ್ಕೆ ತಾವು ಬರುತ್ತೀರಿ ಎಂದು ಕೆಲವು ಸಾರಿ ನಿರೀಕ್ಷೆ ಮಾಡಿದ್ದು ಇದೆ. ಆದರೂ ಕೂಡಾ ಈ ಪರಂಪರೆಗೆ ನಮ್ಮ ಕಾನೂನಿಗೆ ಸರಿಯಾಗಿ ನಾವು ವಿಚಾರ ಎತ್ತಲೇಬೇಕು, ನಾವು ವಿರೋಧಪಕ್ಷದವರಾಗಿ ಎತ್ತುತ್ತಿದ್ದೇವೆ. ಆದರೆ ಮಾನ್ಯ ಮುಖ್ಯಮಂತ್ರಿಯವರನ್ನು ಏನಾದರೂ ಮಾಡಿ ಒಂದು ಪೇಚಿಗೆ ಸಿಲುಕಿಸಬೇಕು ಎಂಬ ಉದ್ದೇಶದಿಂದ ಸರ್ವಥಾ ವಿಚಾರವನ್ನು ನಾವು ಎತ್ತುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರು ಕೆಲವು ವಿಚಾರದಲ್ಲಿ ಹೊಸ ಪರಂಪರೆಯನ್ನು ಹಾಕಿಕೊಂಡು ಬಂದಿದ್ದಾರೆ. ಕೆಲವು ವಿಷಯಗಳನ್ನು ಅಂದಾಜು ಮಾಡುವಾಗಲೇ ಎದ್ದುನಿಂತು ತಮ್ಮದೇ ಆದಂಥ ವಿಚಾರ ದೃಷ್ಟಿಯನ್ನು ಬೀರಿದ್ದು ಇದೆ. ಆದರೆ ನಾವು ಅಂದು ಕೊಂಡಿದ್ದು ಎರಡು–ಮೂರು–ನಾಲ್ಕು ತೆಗೆದುಕೊಂಡಾಗ ಸನ್ಮಾನ್ಯ ಮುಖ್ಯ ಮಂತ್ರಿಯವರೇ ಇದಕ್ಕೆ ಸ್ಪಷ್ಟೀಕರಣವನ್ನು ಕೊಡುತ್ತಾರೆ, ಈ ಸದನದ ಅಥವಾ ಈ ಸಂಸ್ಥೆಗಳ ಪ್ರಜಾಪ್ರಭುತ್ವದ ಒಂದು ಮುಖವಾದಂಥ ಅತ್ಯಂತ ಪ್ರಾಮುಖ್ಯವಾದಂಥ ಶೃಂಗ ಪಂಕ್ತಿಯಲ್ಲಿರತಕ್ಕಂಥ ಈ ಸದನದ ಗೌರವವನ್ನು ಎತ್ತಿ ಹಿಡಿಯತಕ್ಕಂಥ ಕೆಲಸ ಒಮ್ಮೆ ತಪ್ಪಿದರೂ ನಂತರ ಅಲ್ಲಿ ತಿಳಿದುಕೊಂಡು ಅರಿತು ಅದನ್ನು ಸರಿಪಡಿಸುತ್ತಾರೆ ಎಂದೂ ಕೂಡಾ ನಾವು ನಿರೀಕ್ಷೆ ಮಾಡಿದ್ದುದು ಇದೆ.

ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಈ ವಿಚಾರವನ್ನು ಎತ್ತಲೇಬೇಕು ಎನ್ನುವ ಒಂದು ಅಭಿಪ್ರಾಯ ಇತ್ತೋ ಏನೋ ನಾವು ಅದನ್ನು ಎತ್ತಲಿಕ್ಕೆ. You have kindly permitted. ಅದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

SRI A. LAKSHMISAGAR.—No, leave is granted to raise this issue.

SRI M. VEERAPPA MOILY.—It has been raised. He has granted.

SRI A. LAKSHMISAGAR.—He has only permitted.

ಅಧ್ಯಕ್ಷರು.—ನಾನು ಕನ್‌ಸೆಂಟ್ ಕೊಡಬಹುದು ಅಥವಾ ಬಿಡಬಹುದು. I may refuse it or I may give consent.

SRI K.H. PATIL.—Mr. Kharge has spoken. M. Moily is on his legs. Sri Lakshmisagar is speeking. With whose consent they are speaking ? It is your interpretation. But they have been permitted by the Speaker to raise that issue. Let us see what will happen.

MR. SPEAKER.—According to rule 190 I may give consent or I may not. I will read

> "Provided that where the Speaker has refused his consent under Rule 190......"

So, Speaker can refuse his consent under rule 190 also. I may refuse or I may give permission.

SRI M. VEERAPPA MOILY.—That is the second stage. We are not in the second stage.

SRI K.H. PATIL.—You have permitted them to raise the issue. Leave may be granted or may not be granted My friend may even object for granting the leave and then the next course will be open.

SRI M. VEERAPPA MOILY.—That is about the discusion. That is second stage. We are now in the first stage. You have granted leave. We are not on the technicalities. ತಾವು ಅವಕಾಶ ಕೊಟ್ಟಿದ್ದೀರಿ. ಕೊಟ್ಟಿಲ್ಲ ಎಂದು ಇಂಟರ್‌ಪ್ರೆಟ್ ಮಾಡಲಿಕ್ಕೆ ಕಾನೂನು ಪಂಡಿತರಾದ ನೀವು ಹೋಗಬೇಡಿ.

ಅಧ್ಯಕ್ಷರು.—ಅವರು ಏಕೆ ಹೇಳಿದರು ಅಂದರೆ ಕನ್‌ಸೆಂಟ್ ಕೊಟ್ಟಮೇಲೆ ಮಾತನಾಡಬೇಕಿತ್ತು. ಹೋದಸಾರಿ ತಪ್ಪು ಕಲ್ಪನೆ ಆಗಿದೆ.

SRI M. VEERAPPA MOILY —Yes. ತಪ್ಪು ಕಲ್ಪನೆ ಸರಿಯಾಗಿದೆ. You have granted the leave. Why I have congratulated you Otherwise, why should we congratulate you. You have granted the leave. It is an unprecedented and it is anunique gesture made by the Hon'ble Speaker

ಅಧ್ಯಕ್ಷರು — ತಾವು ಪ್ರಿಲಿಮಿನರಿಯಾಗಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ಪತ್ರಿಕಾಗೋಷ್ಠಿ ಹೇಳಿಕೆ ಕೊಟ್ಟಂತಹದ್ದು ಒಂದು ಅದನ್ನು ತಾವು ದಯವಿಟ್ಟು ವಿಚಾರ ಮಾಡಬೇಕು. ಇದು ಒಂದು ಪಕ್ಷದ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದಂತಹ ಹೇಳಿಕೆ ಅಲ್ಲ, ಪಕ್ಷದ ಸಭೆಯಲ್ಲಿ ಮಾಡಿದ್ದು, ಅದಕ್ಕೆ ಯಾವ ತರಹ ದೃಷ್ಟಿಯಿಂದ ಟ್ರೀಟ್‌ಮೆಂಟ್ ಕೊಡಬೇಕು ಎಂದು ಕೌಲ್ ಅಂಡ್ ಶಕ್ದರ್‌ನಲ್ಲಿ ಬೇಸ್ ಪ್ರಿಲಿಮಿನರಿಯಲ್ಲಿ ಇದೆ. ಆದರೆ ಇದು ಸಾರ್ವಜನಿಕವಾಗಿ ಮಾಡಿದಂತಹ ಹೇಳಿಕೆ. ಪತ್ರಿಕಾಗೋಷ್ಠಿಯಲ್ಲಿ ಪತ್ರಿಕಾಕರ್ತರ ಮುಂದೆ ಏನು ಹೇಳಿದ್ದಾರೆ. ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಂತಹ ಹೇಳಿಕೆ ಇದನ್ನು ಪತ್ರಿಕೆಯಲ್ಲಿ ಬ್ರಾಕೆಟ್‌ನಲ್ಲಿ ಹಾಕಿದ್ದಾರೆ. ಅದೇನೆಂದರೆ, ಈ ಶಾಸಕರು ಬ್ರಿಗೇಡ್ ರಸ್ತೆಯನ್ನೇ ತಮ್ಮ ಕ್ಷೇತ್ರವನ್ನಾಗಿ ಮಾಡಿಕೊಳ್ಳದೇ ತಮ್ಮ ನಿಜವಾದ ಕ್ಷೇತ್ರಕ್ಕೆ ಹೋಗಲಿ, ಆಗ ಸರ್ಕಾರದ ಬಗ್ಗೆ ಜನರ ಅಭಿಪ್ರಾಯ ಏನು ಇದೆ ಎಂದು ಗೊತ್ತಾಗುತ್ತದೆ. ಎಂದು ಹೇಳಿದ್ದಾರೆ. ಬೇರೆ ಬೇರೆ ಪತ್ರಿಕೆಯಲ್ಲೂ ಇದು ವರದಿ ಆಗಿದೆ. ಈ ಒಂದು ಪತ್ರಿಕಾ ಹೇಳಿಕೆ ಕೊಡುವಾಗ ಬ್ರಿಗೇಡ್ ರೋಡ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಕಲ್ಪನೆ ಯಾವ ರೀತಿ ಇತ್ತೋ ನನಗೆ ಗೊತ್ತಿಲ್ಲ. ಬಹುಶಃ ಅವರು ತಮ್ಮ ಹಿಂದಿನ ಅನುಭವದಿಂದ ಇದನ್ನು ಹೇಳಿರಬಹುದು. He must be painting the old picture when there must have been something else in the Brigade road. Now it is a respectable place.

MR SPEAKER —Make a short statement which is relevant. ಇದಕ್ಕೆ ನಾನು ಏತಕ್ಕೆ ಅನುಮತಿ ಕೊಡಬೇಕು ಎಂಬುದಕ್ಕೆ ಸೀಮಿತವಾಗಿ ಹೇಳಿ ಮುಗಿಸಿ. ಈಗ ಶ್ರೀಮತಿ ನಾಗರತ್ನಮ್ಮನವರು ಮತ್ತು ಶ್ರೀಮಾನ್ ಖರ್ಗೆ ಅವರು ಯಾವ ರೀತಿ short statement ಮಾಡಿದರೋ ಅದೇರೀತಿ ನೀವೂ ಸಹ short statement ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ —ನಾನೂ ಸಹ Short statement ಮಾಡುತ್ತಿದ್ದೇನೆ. ಈಗ ಬ್ರಿಗೇಡ್ ರೋಡ್‌ನ ಇತಿಹಾಸ ತೆಗೆದುಕೊಂಡರೆ, ಅದರ ಇತಿಹಾಸದ ಕಲ್ಪನೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಇಲ್ಲವೆಂದು ಕಾಣುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಈಗ ಇತಿಹಾಸದ ವಿಚಾರ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಬ್ರಿಗ್ರೇಡ್ ರೋಡ್‌ನ ೨–೩ ದಶಕಗಳ ಹಿಂದಿನ ಇತಿಹಾಸವೇ ಬೇರೆ. ಈ ರಸ್ತೆಯ ಹಿಂದಿನ ಇತಿಹಾಸವೇನಾದರೂ ಇವರಿಗೆ ಮರುಕಳಿಸಿ ಆ ರೀತಿ ಹೇಳಿದರೋ ಅಥವಾ ಆ ರಸ್ತೆಯ ಈಗಿನ ಇತಿಹಾಸದ ಬಗ್ಗೆ ಹೇಳಿದರೋ ಎಂಬುದು ಗೊತ್ತಿಲ್ಲ. ಇದರ ಬಗ್ಗೆ ಅವರ ಕಲ್ಪನೆ ಯಾವ ರೀತಿ ಇತ್ತೋ ನನಗೆ ಗೊತ್ತಿಲ್ಲ. It is a respectable place. ಅಲ್ಲಿ ಬಹಳ ಒಳ್ಳೆಯ ಜನರು ಇದ್ದಾರೆ. ಸನ್ಮಾನ್ಯ ಮಂತ್ರಿಗಳಾದಂಥ ಶ್ರೀ ಚಂದ್ರಶೇಖರ್ ಅವರೂ ಸಹ ಆ ಜಾಗಕ್ಕೆ ಭೇಟಿ

ಕೊಟ್ಟಿದ್ದಾರೆ. ಅಲ್ಲಿ ಸಿಗುವಂತಹ ಒಳ್ಳೆಯ ನೀಲಗೀಸ್ ಬ್ರೆಡ್ ತೆಗೆದುಕೊಳ್ಳಬೇಕಾದರೆ ಅಲ್ಲಿಗೆ ಹೋಗಬೇಕಾಗುತ್ತದೆಂದೂ ಸಹ ಅವರು ಹೇಳಿದ್ದಾರೆ. ಅಷ್ಟೇ ಅಲ್ಲ, ಫಸ್ಟ್‌ಕ್ಲಾಸ್ ಷೂ ತೆಗೆದುಕೊಳ್ಳಬೇಕೆಂದರೆ ಅಲ್ಲಿಗೆ ಹೋಗಬೇಕಾಗುತ್ತದೆ. ಆದರೆ ಬ್ರಿಗೇಡ್ ರಸ್ತೆಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತಿನಿಂದ people will start suspecting the Brigade Road. He is badly painting the Brigade road.

ಅಧ್ಯಕ್ಷರು.—ತಾವು ವಿವರಕ್ಕೆ ಹೋಗುತ್ತಿದ್ದೀರಿ. ಅದು ಸರಿಯಲ್ಲ, ಒಂದು ಚಿಕ್ಕ ಸ್ಟೇಟ್‌ಮೆಂಟ್ ಮಾಡಿದರೆ ಸಾಕು,

ಶ್ರೀ ಎಂ ವೀರಪ್ಪಮೊಯಿಲ್ಲಿ.—ಆಯಿತು. ನಾನು ಅಲ್ಲಿನ ಒಂದು ಕಲ್ಪನೆಯ ಬಗ್ಗೆ ಹೇಳಿದ್ದು. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಬ್ರಿಗೇಡ್ ರಸ್ತೆಯ ಲೇಟೆಸ್ಟ್ ಕಲ್ಪನೆ ಏನು ಎಂಬುದು ಗೊತ್ತಿಲ್ಲವೆಂದು ಕಾಣುತ್ತದೆ. ಅವರು ೩ ದಶಕಗಳ ಹಿಂದಿನ ಹಳೆಯ ಚರಿತ್ರೆಯನ್ನು ಕಲ್ಪನೆ ಮಾಡಿಕೊಂಡು ಆ ರೀತಿ ಹೇಳಿದ್ದಾರೆಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಗೊತ್ತುಂಟು. ಬ್ರಿಗೇಡ್ ರಸ್ತೆಯ ಬಗ್ಗೆ ಅವರಿಗೆ ಎಷ್ಟು ಜ್ಞಾನ ಉಂಟೋ ಅಷ್ಟೇ ನನಗೂ ಸಹ ಗೊತ್ತುಂಟು.

ಶ್ರೀ ಎಂ. ವೀರಪ್ಪಮೊಯಿಲಿ.—ಹಾಗಿದ್ದರೆ ತಾವು ಆ ರೀತಿ ಏತಕ್ಕೆ ಹೇಳಿಕೆ ಕೊಟ್ಟರಿ ?

ಅಧ್ಯಕ್ಷರು.— ತಾವು ಜಾಗ್ರುತೆ ಮುಗಿಸಿಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ರಸ್ತೆಯ ಲೇಟೆಸ್ಟ್ ಕಲ್ಪನೆ ನಿಮಗಿದ್ದರೆ ಹಳೆಯ ಜಾಡಿನ ನೆನಪು ಶಮಗೆ ಮರುಕಳಿಸಬೇಕಾದ ಅವಶ್ಯಕತೆ ಏನಿತ್ತು ? Let us know about it because it will reflect on the entire house. ಅದು ಏನೇ ಇರಲಿ, ಈ ಮಾತನ್ನು ನಾನು ಲೈಟರ್‌ಸೈಡ್‌ನಲ್ಲಿ ಹೇಳಿದೆ. ತಾವು ಇಂತಹ ಹೇಳಿಕೆ ಕೊಟ್ಟ ಮೇಲೆ ಜನರಲ್ಲಿ ಏನು ಒಂದು ಕಲ್ಪನೆ ಉಂಟಾಗಿದೆ ಎಂದರೆ, ಇವರು ಶಾಸಕರಾಗಿ ಚುನಾಯಿತರಾಗಿದ್ದು ಇದಕ್ಕಾಗಿಯೇ ಎಂಬ ಕಲ್ಪನೆ ಜನರಲ್ಲಿ ಬಂದಿದೆ, ಅವರವರ ಕ್ಷೇತ್ರಗಳ ಕೆಲಸಗಳನ್ನು ಮಾಡಲು ಮತ್ತು ಇಲ್ಲಿ ಶಾಸನಸಭಾ ಕೆಲಸಗಳನ್ನು ಮಾಡುವುದಕ್ಕಾಗಿ ಶಾಸಕರಾಗಿ ಆಯ್ಕೆ ಆಗಿರುವುದು ಎಂಬುದನ್ನು ತಾವು ಅರಿತುಕೊಳ್ಳಬೇಕು. ಈ ಒಂದು ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಎಲ್ಲ ಶಾಸಕರನ್ನೂ ಕುರಿತು ಹೇಳಿದರೋ ಅಥವಾ ಭಿನ್ನಮತೀಯ ಶಾಸಕರನ್ನು ಕುರಿತು ಹೇಳಿದರೋ ಎಂಬುದು ನಮಗೆ ಗೊತ್ತಿಲ್ಲ. ಇದರ ಬಗ್ಗೆ ಸಹ ಅವರು ವಿವರಣೆ ಕೊಡಬೇಕಾಗುತ್ತದೆ. ಒಂದು ವೇಳೆ ಅವರು ಈ ಮಾತನ್ನು ಭಿನ್ನಮತೀಯ ಶಾಸಕರನ್ನು ಕುರಿತು ಹೇಳಿದ್ದರೂ ಸಹ, ಈ ಶಾಸಕರುಗಳು ಕೇವಲ ಬ್ರಿಗೇಡ್ ರೋಡ್‌ನಲ್ಲಿ ಮತ್ತು ಶಾಸಕರ ಭವನದಲ್ಲಿ ಕ್ಯಾಂಪ್ ಮಾಡಿಕೊಂಡು ಸ್ವಚ್ಛಂದವಾಗಿ ವಿಲಾಸಿವಿಹಾರ ಮಾಡುತ್ತಿದ್ದಾರೆ ಎಂಬುದು ತಮ್ಮ ವಾದವೇ? ಇದರ ಬಗ್ಗೆ ತಮ್ಮಿಂದ ನಮಗೆ ವಿವರಣೆ ಬೇಕು. ಇಲ್ಲದಿದ್ದರೆ ಇದು ಇಡೀ ಸದನದ ಸದಸ್ಯರ ಮೇಲೆ ಪರಿಣಾಮ ಬೀರಬಹುದು. What is important is, it is a reflection on the members.

ಅಧ್ಯಕ್ಷರು.—ತಾವು ವಿವರಗಳಿಗೆ ಹೋಗುತ್ತಿದ್ದೀರಿ. ಅದು ಸರಿಯಲ್ಲ. ಜಾಗ್ರುತೆ ಮುಗಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಕೆಲವು ಶಾಸಕರು ಸ್ವಚ್ಛಂದ ವಿಲಾಸಿ ವಿಹಾರ ಮಾಡುತ್ತಿದ್ದಾರೆ ಎಂಬುದು ತಮ್ಮ ಅಭಿಪ್ರಾಯವೇ ಹೇಗೆ? ನಿಮ್ಮ ಅಭಿಪ್ರಾಯದಲ್ಲಿ ಬ್ರಿಗೇಡ್ ರೋಡ್ ಎಂದರೆ ಏನು ಅರ್ಥ ?

ಶ್ರೀ ರಾಮಕೃಷ್ಣ ಹೆಗಡೆ.—ಪೇಪರ್‌ನಲ್ಲಿ ಏನು ಇದೆಯೋ ಅದನ್ನು ಓದಿಕೊಂಡು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗಿದ್ದರೆ ಇವರ ಅರ್ಥ ಏನಾಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ಒಬ್ಬರು ಮಾತನಾಡುವಾಗ ಮಧ್ಯೆ ಎದ್ದುನಿಂತು ಮಾತನಾಡುವ ಇಚ್ಛೆ ನನಗಿಲ್ಲ. ಈಗ ತಾವು ಏನು ಓದಿ ಹೇಳಿದಿರೋ, ಅಷ್ಟಕ್ಕೆ ಮಾತ್ರ ತಮ್ಮ ವಾದ ಅಥವಾ ನಿಲುವನ್ನು ಮಿತಿಗೊಳಿಸಬೇಕು. ಅದನ್ನು ಬಿಟ್ಟು ನಿಮ್ಮ ಮನಸ್ಸಿನಲ್ಲಿ ಯಾವ ಯಾವ ವಾಸನೆ ಇದೆಯೋ ಅದನ್ನೆಲ್ಲಾ ತಂದು ಇದರಲ್ಲಿ ಹಾಕಬಾರದು? ಇವರ ವಿಲಾಸ ವ್ಯವಹಾರ, ಮತ್ತೊಂದು

ಮಗದೊಂದು ಯಾವುದೂ ಇದರಲ್ಲಿ ಇಲ್ಲ. ಆದ್ದರಿಂದ ಅದನ್ನೆಲ್ಲಾ ಏತಕ್ಕೆ ಇದರಲ್ಲಿ ತಂದು ಹಾಕುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗಿದ್ದರೆ ಈ ಮಾತನ್ನು ಏತಕ್ಕೆ ಹೇಳಿದಿರಿ? ನೀವೇನಾದರೂ ಬ್ರಿಗೇಡ್ ರೋಡಿನಲ್ಲಿ ಜನತಾ ಸಭೆಯನ್ನು ಮಾಡುತ್ತಿದ್ದೀರಾ, ನೀವೇನಾದರೂ ಭಿನ್ನಮತೀಯ ಶಾಸಕರ ಸಭೆಯನ್ನು ಅಲ್ಲಿ ಮಾಡುತ್ತಿದ್ದೀರಾ? ಈ ರೀತಿ ನೀವು ಹೇಳಿರುವುದರಿಂದ ಅದು ಈ ಮನೆಯ ಮಾನ್ಯ ಸದಸ್ಯರ ಮೇಲೆ ರಿಫ್ಲೆಕ್ಷನ್ ಆಗುತ್ತದೆ.

ಅಧ್ಯಕ್ಷರು.—ನೀವು ಬಹಳ ದೂರ ಹೋಗಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಇದನ್ನೆಲ್ಲಾ ಏತಕ್ಕೆ ಕಲ್ಪನೆ ಮಾಡುತ್ತೀರಿ? ಮೊದಲು ನೀವು ಏನು ಹೇಳಿದಿರಿ, ಅಷ್ಟಕ್ಕೆ ಮಾತ್ರ ಮಿತಿಗೊಳಿಸಿ ಹೇಳಿ.

ಅಧ್ಯಕ್ಷರು.—ಮಾನ್ಯ ಮಲ್ಲಿಕಾರ್ಜುನ ಖಾರ್ಗೆ ಅವರು ಮತ್ತು ಶ್ರೀಮತಿ ನಾಗರತ್ನಮ್ಮನವರು ಹೇಳಿದಂತೆ ನೀವೂ ಸಹ ಚಿಕ್ಕದಾಗಿ ಹೇಳಿ ಮುಗಿಸಿ. ಬಹಳ ದೂರಕ್ಕೆ ಹೋಗುವುದು ಬೇಡ. ಇದಕ್ಕೆ ಅನುಮತಿ ಏತಕ್ಕಾಗಿ ಕೊಡಬೇಕು ಎಂಬುದಕ್ಕೆ ಮಾತ್ರ ಮಿತಿಗೊಳಿಸಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದಕ್ಕೆ ಅನುಮತಿ ಪಡೆಯಬೇಕಾದರೆ ನಾವು ನಿಮ್ಮನ್ನು ಕನ್‌ವಿನ್ಸ್ ಮಾಡಬೇಕಾಗುತ್ತದೆ. ಮೊದಲು ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅನುಭವವನ್ನು ಹೇಳಬೇಕು. ಅವರು ಹೇಳಿದ ಮೇಲೆ ಅಲ್ಲಿಗೆ ಹೋಗಬೇಕೋ ಅಥವಾ ಬೇಡವೋ ಎಂಬುದನ್ನು ವಿಚಾರ ಮಾಡೋಣ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ನನ್ನ ಅನುಭವ ಕಟ್ಟಿಕೊಂಡು ಏನು ಮಾಡುತ್ತೀರಿ? ನೀವೇನಾದರೂ ನನ್ನ ಅನುಭವದಿಂದ ರುಚಿ ನೋಡುತ್ತೀರಾ ಹೇಗೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲ, ಇಲ್ಲ, ನಿಮ್ಮ ಅನುಭವದಿಂದ ರುಚಿ ನೋಡುವುದು ನಮಗೆ ಸಾಧ್ಯವಿಲ್ಲ. ನಿಮ್ಮ ಅನುಭವ ನಿಮಗೆ ಇರಲಿ.

(ಸಭೆಯಲ್ಲಿ ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಲ್ಲಿ ಮಂತ್ರಿಗಳು ಉತ್ತರ ಕೊಡುವಾಗ ಮಧ್ಯದಲ್ಲಿ ಬೇರೆ ಯಾರೂ ಮಾತನಾಡುವುದು ಬೇಡ ಎಂದು ತಾವು ಹೇಳುತ್ತೀರಿ. ಆದರೆ ಈ ಕಡೆಯವರು ಮಾತನಾಡುತ್ತಿರುವಾಗ ಅವರು ಏತಕ್ಕೆ ಮಧ್ಯದಲ್ಲಿ ಈ ರೀತಿ ಮಾತನಾಡಬೇಕು? ಇವರು ಹೇಳುವುದನ್ನೆಲ್ಲಾ ಹೇಳಿದ ಮೇಲೆ ಅವರು ಸ್ಟೇಟ್‌ಮೆಂಟ್ ಕೊಡಲಿ. ತಾವು ಆ ಕಡೆಯವರಿಗೂ ಸಹ ಮಧ್ಯದಲ್ಲಿ ಮಾತನಾಡಲು ಅವಕಾಶ ಕೊಡಬಾರದು:

೪—೦೦ ಪಿ.ಎಂ.

ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಕಲ್ಪನೆಯಲ್ಲಿ ಬ್ರಿಗೇಡ್ ರೋಡಿಗೆ ಹೋಗಿ ಒಳ್ಳೆಯ ಕೆಲಸ ಮಾಡುತ್ತಾರೆ ಅಂದರೆ ನಮಗೆ ಏನಿಲ್ಲ, ಅದು ಅವರಿಗೆ ಬಿಟ್ಟಿದ್ದು. It is his statement and it is his subjective statement. ನಮ್ಮ ಸ್ಟೇಟ್ ಮೆಂಟ್ ಅಲ್ಲ ಅದು. But it has badly reflected the image of the Legistlators.

ಅಧ್ಯಕ್ಷರು.—ಮಾನ್ಯ ವೀರಪ್ಪ ಮೊಯಿಲಿಯವರೇ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಇಷ್ಟು ಅವಸರ ಮಾಡಿದರೆ ಹೇಗೆ?

ಅಧ್ಯಕ್ಷರು.—ನೋಡಿ ಈಗ ಬೇಡ. ನಾನು ಅವಕಾಶ ಕೊಟ್ಟ ಮೇಲೆ ಡೀಟೇಲಾಗಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ಕೆಲವು ಪ್ರಾಕಾರಗಳಿವೆ. ಏಕೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು. ಅದಕ್ಕೆ ಉತ್ತರವಾಗಿ ಸನ್ಮಾನ್ಯ ದೇವೇಗೌಡರು ಉತ್ತರ ಕೊಟ್ಟರು. ಏನೆಂದರೆ, ಒಬ್ಬೊಬ್ಬ ಮಂತ್ರಿಗಳು ಜೂಜಾಟದಲ್ಲಿ ಒಂದೊಂದು ನಿಮಿಷದಲ್ಲಿ ಒಂದೊಂದು ಲಕ್ಷ ಕಳೆದುಕೊಳ್ಳುತ್ತಾರೆ ಎಂದು ಹೇಳಿದರು. We are not relishing it. We don't want it to reflect on the Ministers.

ಶ್ರೀ ಎಂ.ಪಿ. ಪ್ರಕಾಶ್.—ಶ್ರೀಮಾನ್ ದೇವೇಗೌಡರವರು ಅಂತಹ ಪತ್ರಿಕಾ ಹೇಳಿಕೆಯನ್ನು ನಾನು ಕೊಟ್ಟಿಲ್ಲ ಎನ್ನುವಂಥ ರೀತಿಯಲ್ಲಿ ಹೇಳಿದ್ದಾರೆ.

ಶ್ರೀ ಧರ್ಮಸಿಂಗ್.—ಅದನ್ನು ಅದನ್ನು ಈ ಸದನದಲ್ಲಿ ಹೇಳಲಿ.

ಶ್ರೀ ಎಂ.ಪಿ.ಪ್ರಕಾಶ್.—ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಸಾರಿ ಕೇಳಿ. ಇದನ್ನು ಹೇಳಿದಮೇಲೆ ಸರಿಯಾಗಿ ಉತ್ತರ ಕೊಡಬೇಕು.

ಅಧ್ಯಕ್ಷರು.—ರೂಲಿಂಗ್ ಇದೆ ಹೇಳುತ್ತೇನೆ, ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ದೇವೇಗೌಡರು ಆ ರೀತಿ ಹೇಳಿದರೋ ಇಲ್ಲವೋ ಎನ್ನುವುದನ್ನು ಹೇಳಲಿ.

MR. SPEAKER.—Please come to the Point.

SRI M. VEERAPPA MOILY.—I am coming to that. I will refer Koul and Shakdhar. Chapter 11 and 12.

ಅಧ್ಯಕ್ಷರು.—ಪೇಜ್ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಪೇಜ್ ಹೇಳುತ್ತೇನೆ. ಕಂಟೆಂಟ್ಸ್ ಹೇಳುತ್ತೇನೆ, ಪೇಜ್ ಹೇಳಿದರೆ ಏನು ಪ್ರಯೋಜನ ?

ಅಧ್ಯಕ್ಷರು.—ಪೇಜ್ ಹೇಳಿ, ಪ್ಯಾರಾ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—೧೧ನೇ ಚಾಪ್ಟರ್ ನೋಡಿ.

ಒಬ್ಬ ಸದಸ್ಯರು.—ಅವರು ಹೇಳುವ ಪೇಜಿನಲ್ಲಿ ಪೆರೇಡ್ ರೋಡ್ ಇದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—Why he is interferring. ಚಾಪ್ಟರ್ ೧೧–೧೨ ಇದೆ. ಇದರ ಬಗ್ಗೆ ತಾವು ಈ ವಿಚಾರವನ್ನು ಗಮನಿಸುವಾಗ ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿ ಚಾಪ್ಟರ್ ೧೧ ಅನ್ನು ಮಾತ್ರ ನೋಡಿದರೆ ಸಾಲದು. ೧೧ ಮತ್ತು ೧೨ ಅನ್ನೂ ಜೊತೆಯಲ್ಲೇ ಓದಬೇಕಾಗುತ್ತದೆ. ಏಕೆಂದರೆ ಬಹಳ ಇದು ಪ್ರಮುಖವಾದಂಥ ವಿಚಾರ.

> "In order to maintain the highest tradition in Parliamentary life, Members of Parliament are expected to observe certain standards of conduct, both inside the House as well as outside it."

The words used is, "both inside and alsooutside it" We think of the conduct here also.

> "It is necessary that the standard both inside the House and out side the House will have to be looked-into. Their behaviour should such as to enhance the dignity of Parliament and its members in general. The conduct of members should not be contrary to the dignity of the House or in any way inconsistent with the standards which Parliament is entitled to expect of his members."

ಇದು ಬಹಳ ಪ್ರಮುಖವಾದಂತ ಒಂದು ವಿಚಾರ. ಸನ್ಮಾನ್ಯ ಮುಖ್ಯ ಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟು ಸದಸ್ಯರ ಮೇಲೆ ಒಂದು ರೀತಿಯ ಆಪಾದನೆ ಅಥವಾ ಒಂದು ರೀತಿಯಾದಂಥ

ದೋಷಪೂರಿತವಾದಂಥ ದೃಷ್ಟಿಯಿಂದ ಸಾರ್ವಜನಿಕರು ಶಾಸಕರನ್ನು ನೋಡುವ ರೀತಿಯಲ್ಲಿ ಒಂದು ಅಭಿಪ್ರಾಯ ಬರುವಂತೆ ಹೇಳಿದ್ದಾರೆ. ಶಾಸಕರು ಬ್ರಿಗೇಡ್ ರೋಡಿಗೆ ಹೋಗುತ್ತಾರೆ ಅಥವಾ ಶಾಸಕರು ಕೆಲಸ ಮಾಡುವುದಿಲ್ಲ ಎಂದು ಹೇಳಿದ ಮೇಲೆ...

ಅಧ್ಯಕ್ಷರು.—ಅದರ ಮೆರಿಟ್‌ಗೆ ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿರುವುದನ್ನು ರೆಫರ್ ಮಾಡುತ್ತಾ ಇದ್ದೇನೆ. By calling these legislators....

ಅಧ್ಯಕ್ಷರು.—ನೋಟೀಸನ್ನು ಓದಿ ಹೇಳಲೇ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ತಿಳಿದೇ ನೋಟಿಸ್ ಕೊಟ್ಟಿದ್ದು

ಅಧ್ಯಕ್ಷರು.—ದಯವಿಟ್ಟು ಅದರ ಮೆರಿಟ್‌ಗೆ ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಡೀ ಸೂಚನೆಯ ಒಂದು ವ್ಯಾಪ್ತಿ ಅಷ್ಟಿದೆ. It is as good as a short statement. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಹೇಳಿಕೆಯನ್ನು ಸದಸ್ಯರ ಮೇಲೆ ಕೊಟ್ಟಾಗ what kind of standard we can keep. ಅವರನ್ನು ನೀವು ವಿಚಾರಣೆ ಮಾಡಬೇಕು.

ಅಧ್ಯಕ್ಷರು.—ಜನರಲ್ ಆಗಿ ಏಕೆ ಮಾತನಾಡುತ್ತೀರಿ, ಈಗ ನೋಟಿಸನ್ನು ಕೊಟ್ಟಿದ್ದೀರಿ, ಡೀಟೈಲಾಗಿ ಮಾತನಾಡುವುದಕ್ಕೆ ಹೋಗಬೇಡಿ, ಬೇರೆ ವಿಚಾರ ಏನೂ ಹೇಳಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಡೀಟೈಲಿಗೆ ಹೋಗಬೇಕಾದರೆ ದಿನಗಟ್ಟಲೆ ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ಲೀಡರ್, ಡೆಪ್ಯೂಟಿ ಲೀಡರ್, ಹೇಗೆ ಹೇಳಿದ್ದಾರೆ. ಡಿಸ್‌ಕಷನ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಬಹಳ ಪ್ರಾಮುಖ್ಯವಾದಂತಹ ವಿಚಾರ. ತಾವು ಹೀಗೆ ಹೇಳಿದರೆ ಹೇಗೆ ? ದಿನಬೆಳಗಾದರೆ ಹಕ್ಕುಚ್ಯುತಿ ಸೂಚನೆ ನಾವು ಕೊಡುವುದಿಲ್ಲ. ತಾವು ಈ ವಿಷಯದಲ್ಲಿ ಸ್ಪಷ್ಟೀಕರಣಕ್ಕೆ ಅವಕಾಶ ಕೊಟ್ಟಿದ್ದರೆ, ನಾವು ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿರಲಿಲ್ಲ.

SRI RAMAKRISHNA HEGDE.—There is a fundamental difference. ಬ್ರಿಗೇಡ್ ರೋಡ್ ಬಗ್ಗೆ ಅವರ ತಲೆಯಲ್ಲಿ ಏನೋ ತುಂಬಿ ಹೋಗಿದೆ. ಅದು ನನ್ನ ದೃಷ್ಟಿಯಿಂದ it is not a place of ill-repute. ಅವರ ದೃಷ್ಟಿಯಿಂದ ನೋಡಿದರೆ ಅವರ ಮಾತು ಬೇರೆ. One of the best known shoping centre in Bangalore. ಇದು ಕಂಟೋನ್ಮೆಂಟ್ ನಲ್ಲಿ ಇದ್ದು ಶಾಪಿಂಗ್ ಸೆಂಟರ್ ಇದೆ. ಬ್ರಿಗೇಡ್ ರೋಡ್ ಎಂದರೆ ಕೆಟ್ಟ ಅಪಮಾನವಾಗುವುದು ಎಲ್ಲಿಂದ ಬಂತು ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ತಿದ್ದುಪಡಿಯನ್ನು ಮಾಡುತ್ತಿದ್ದೀರಿ, ಮಾಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬ್ರಿಗೇಡ್ ರೋಡ್ ಎಂದರೆ ವ್ಯವಹಾರಕ್ಕೆ ಹೋಗುವ ಒಂದು ಕೇಂದ್ರವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಮುಖ್ಯ ಮಂತ್ರಿಗಳು ಆ ಹೇಳಿಕೆ ಕೊಟ್ಟ ಮೇಲೆ ಈ ರೀತಿ ತಿದ್ದುಪಡಿಯನ್ನು ಮಾಡುವುದಾದರೆ ನಾನು ಸ್ವಾಗತ ಮಾಡುತ್ತೇನೆ.

ಅಧ್ಯಕ್ಷರು.—ನೀವು ಸುಮ್ಮನೆ ಊಹೆ ಮಾಡಿ ಆರ್ಗ್ಯುಮೆಂಟ್ ಮಾಡಬೇಡಿ, ಎಷ್ಟು ಬೇಕೋ ಅಷ್ಟು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಯಾವ ವಸ್ತು ಬೇಕು ಎಂದು ಕೇಳಿದರೆ ನಾನು ಅದನ್ನೇ ಹೇಳುತ್ತೇನೆ. ಬೇರೆ ಹೇಳುವುದಿಲ್ಲ ಅದಕ್ಕಿಂತ ಮೊದಲು ಪ್ರಸ್ತಾವನೆ ಎಂದು ಹೇಳಿದಿರಿ, ಏಕೆಂದರೆ ಹೇಳಿಕೆಯನ್ನು ಕೊಟ್ಟವರು ಸನ್ಮಾನ್ಯ ಮುಖ್ಯಮಂತ್ರಿಯವರು. ಅವರ ಮನಸ್ಸಿನಲ್ಲಿ

ಏನಿದೆ ಎನ್ನುವುದು ಅವರಿಗೆ ಗೊತ್ತಿದೆ. ಅವರ ಆತ್ಮಸಾಕ್ಷಿಗೆ ಗೊತ್ತಿದೆ, ಶಾಸಕರು ಅವರವರ ಕ್ಷೇತ್ರವನ್ನು ಸಂಪೂರ್ಣವಾಗಿ ತಿರಸ್ಕರಿಸಿ ಇವತ್ತು ಬೆಂಗಳೂರಿನಲ್ಲಿದ್ದಾರೆ, ಬ್ರಿಗೇಡ್ ರೋಡಿನಲ್ಲಿ ತಿರುಗಾಡುತ್ತಿದ್ದಾರೆಂದು ಹೇಳಿದ್ದಾರೆ.

I will refer again from K ul and Shakdhar book Page 245. ast but one para.

> "At a meeting of the Congress Parliamentary part Shri Arjun Arora had made some allegations against two Ministers on June 20, 1967. The Prime-Minister made a statement in the House that the allegations had not been substantiated on the basis of the material furnished by the member.
>
> On June 21, 1967 a question of privilege was raised in the House that since the allegations against the two Ministers who were members of the House had not been substantiated the entire House had been brought into disrepute."

ಆಮೇಲೆ ಅದನ್ನು ಏತಕ್ಕೆ ತೆಗೆದುಹಾಕಿದ್ದುದು ಎಂದರೆ, It was made inside the party meeting. ಮೀಟಿಂಗ್‌ನಲ್ಲಿ ಮಾಡಿದ್ದರಿಂದ that is not relevant. ಆದ್ದರಿಂದ ಇದನ್ನು ಕೋಟ್ ಮಾಡಲು ತಾವು ಹೋಗಬಾರದು. ಏಕೆಂದರೆ ಮುಖ್ಯಮಂತ್ರಿಗಳು ಹೇಳಿಕೆ ಮಾಡಿದ್ದುದು ಪಾರ್ಟಿ ಮೀಟಿಂಗ್‌ನಲ್ಲಿ ಅಲ್ಲ. Outside the party meeting, ಅವರು ಮಾಡಿದ ಸ್ಟೇಟ್‌ಮೆಂಟ್ ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಶಾಸಕರು, ಶಾಸಕರ ಭವನ ಅಥವಾ ಬ್ರಿಗೇಡ್ ರೋಡಿಗೆ ಮೀಸಲಾಗಿದ್ದ ಶಾಸಕರಲ್ಲ? ಒಂದು ವೇಳೆ ಶಾಸಕರು ಪ್ರಾಮುಖ್ಯವಾದ ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಿದರೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಪಾಯಿಂಟ್ ಔಟ್ ಮಾಡಬೇಕು. ಯಾರು ಎಂದು ಹೇಳಬೇಕು. ಹೆಸರನ್ನು ಸ್ಪೆಸಿಫೈ ಮಾಡಬೇಕು. ಅಥವಾ ಅದರ ಮೇಲೆ ತನಿಖೆ ಮಾಡಬೇಕು. Under Chapter XII of the Kaul and Shakder's Parliamentary Procedure and Practice, you are entitled to appoint a Committee to enquire into this matter, ಅದು ಇಲ್ಲದಿದ್ದರೆ ಹಕ್ಕುಚ್ಯುತಿ ಬಗ್ಗೆ ಚರ್ಚೆಯಾಗಬೇಕು ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ನಾಜೂಕಾಗಿ ತಿರುಗಿಸಿ ತಿದ್ದುಪಡಿ ಮಾಡಿ now he wants to give a state of prestige or privilege to Brigade Road. If it is so, we also welcome it.

SRI M. P. PRAKASH.—Have you got any doubt about it? Why are you so much...

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ತಾವು ಮಾತನಾಡುವಾಗ ಬ್ರಿಗೇಡ್ ರೋಡ್‌ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದೀರಿ, ಅದು ಕೆಟ್ಟದ್ದು ಎಂದು ಹೇಳಲಿಲ್ಲ. ಖಾರ್ಗೆಯವರು ಮಾತನಾಡುವಾಗ ಒಂದೆರಡು ನಿಮಿಷ ಬ್ರಿಗೇಡ್ ರೋಡ್‌ನಲ್ಲಿ ಇದ್ದರು. ಆದರೆ ಮಾನ್ಯ ಮೊಯಿಲಿಯವರು ಪ್ರಾರಂಭದಿಂದಲೂ ಬ್ರಿಗೇಡ್ ರೋಡಿನಲ್ಲೇ ಇದ್ದಾರೆ.

(ನಗು)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬ್ರಿಗೇಡ್ ರೋಡಿನಲ್ಲಿ ಅವರ ಪಾಲಿಟಿಕ್ಸ್ ಇದೆ. ಮಾನ್ಯ ದೇವೇಗೌಡರ ಭಾಷಣದಲ್ಲೂ ಬ್ರಿಗೇಡ್ ರೋಡ್ ಬರುತ್ತದೆ. ಮುಖ್ಯಮಂತ್ರಿಗಳ ಪ್ರೆಸ್-ಸ್ಟೇಟ್‌ಮೆಂಟ್‌ನಲ್ಲೂ ಬ್ರಿಗೇಡ್ ರೋಡ್ ಬರುತ್ತದೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ವಿಷಯ ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳು ಬ್ರಿಗೇಡ್ ರೋಡ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ದೇವೇಗೌಡರೂ ಕೂಡ ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವೆರಡರ ಬಗ್ಗೆಯೂ ವಿಚಾರ ಆಗಬೇಕು. ಇಂತಹದ್ದು ನಡೆದರೆ ಅವರು ಪಕ್ಷದಿಂದ ವಿಚಾರಣೆ ಮಾಡುತ್ತೇವೆಂದು ಹೇಳುತ್ತಾರೆ. ಒಂದು ಲಕ್ಷ ಜೂಜಾಟ ಆಡಿದ್ದು ಯಾರು ಎಂದು ಹೇಳಬೇಕು.

(ಗೊಂದಲ)

ಅಧ್ಯಕ್ಷರು.—ಪ್ರಿಲಿಮಿನರಿ ಹೇಳಿ ಎಂದು ಹೇಳಿದರೆ ತಾವು ವಿವರವಾದ ಪ್ರಸ್ತಾಪಕ್ಕೆ ಹೋಗುತ್ತಿದ್ದಿರಿ.

ಶ್ರೀ ಎಂ. ವೀರಪ್ಪಮೊಯಿಲಿ.—ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ತಾವು ಈ ಸದನಕ್ಕೆ ಅನ್‌ಕಂಡಿಷನಲ್ ಅಪಾಲಜಿ ಕೊಡಿಸಬೇಕು ಏಕೆಂದರೆ ಈ ಸದನದ ಘನತೆ ಗೌರವವನ್ನು ಎತ್ತಿಹಿಡಿಯಂತಕ್ಕ ಮಮಕಾರ—ಪ್ರಾಮಾಣಿಕ ಅನಿಸಿಕೆ ಇದ್ದರೆ ಮುಖ್ಯ ಮಂತ್ರಿಗಳು ಇದನ್ನು ಮಾಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಡಿ...

ಶ್ರೀ ಡಿ. ಎ. ಚಿನ್ನಪ್ಪ.—ಸನ್ಮಾನ್ಯ ಅಧ್ಯಕ್ಷರೇ...

(ಕಾಂಗ್ರೆಸ್ ಪಕ್ಷದ ಅನೇಕ ಮಾನ್ಯ ಸದಸ್ಯರುಗಳು ಒಟ್ಟಿಗೆ ನಿಂತು ಮಾತನಾಡಲು ಅವಕಾಶ ಕೋರಿದರು. ಸದನದಲ್ಲಿ ಗೊಂದಲ ಉಂಟಾಯಿತು.)

ಅಧ್ಯಕ್ಷರು.—ನಾನು, ನನ್ನ ಕನ್‌ಸೆಂಟ್ ಕೊಟ್ಟರೆ ಮಾತ್ರ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ. ಇದು ಪ್ರಿಲಿಮಿನರಿ ಹಿಯರಿಂಗ್ ಮಾತ್ರ ಉಳಿದವರಿಗೆ ಅವಕಾಶವಿಲ್ಲ. ನಾನು ಈಗಾಗಲೇ ವಿರೋಧಪಕ್ಷದ ನಾಯಕಿಯವರಿಗೆ, ಉಪನಾಯಕರಿಗೆ ಹಾಗೂ ಮಾಜಿ ನಾಯಕರಿಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರು ಕೆ. ಹೆಚ್. ಪಾಟೀಲರು ಚಿನ್ನಪ್ಪನವರು ನೋಟಿಸಿಗೆ ಸಹಿಯನ್ನು ಮಾಡಿದ್ದಾರೆ. ತಾವು ಎಲ್ಲರನ್ನೂ ಕೇಳಿದರೆ ಖಂಡಿತ ಕನ್‌ವಿನ್ಸ್ ಆಗುತ್ತೀರಿ...

ಅಧ್ಯಕ್ಷರು.—ನನ್ನ ಕನ್‌ಸೆಂಟ್ ಕೊಟ್ಟರೆ ಮಾತ್ರ ಅವಕಾಶ ಕೊಡುತ್ತೇನೆ. ಆರ್ಗ್ಯುಮೆಂಟ್ ಮಾಡುವಾಗ ಹತ್ತು ವಕೀಲರುಗಳು ವಾದ ಮಾಡಿದರೆ ಮಾತ್ರ ಜಡ್ಜ್ ಕನ್‌ವಿನ್ಸ್ ಆಗುತ್ತಾರೆ ಎಂದೇನೂ ಇಲ್ಲ. ಒಬ್ಬ ವಕೀಲರು ವಾದ ಮಾಡಿದರೂ ಸಾಕು. ಕನ್‌ವಿನ್ಸ್ ಆಗಬಹುದು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್...

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅವರು ಏನು ಹೇಳುತ್ತಾರೋ ಕೇಳೋಣ. ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ರೂಲ್ ೧೯೦ರ ಪ್ರಕಾರ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಯಾರು ಸಿಗ್ನೇಚರ್ ಮಾಡಿದ್ದಾರೆ ಅವರಾದರೂ ಮಾತನಾಡಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು.—ಈಗ ಸಿಗ್ನೇಚರ್ ಮಾಡಿದವರೆಲ್ಲರಿಗೂ ಅವಕಾಶ ಕೊಡಲಿಕ್ಕೆ ಆಗುವುದಿಲ್ಲ. ಇದು ಪ್ರಿಲಿಮಿನರಿ. ಒಬ್ಬರು, ಅಥವಾ ಇಬ್ಬರೂ ಮಾತನಾಡಬೇಕು. ಅಂಥಾದ ರಲ್ಲಿ ಈಗ ಮೂರು ಮಂದಿ ಮಾತನಾಡಿದ್ದೀರಿ. ನಾನು ಕನ್‌ಸೆಂಟ್ ಕೊಟ್ಟರೆ ಎಲ್ಲರಿಗೂ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಏನು ಹೇಳುತ್ತಾರೋ ಕೇಳೋಣ. ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ೬೬ ಮಂದಿ ಸಿಗ್ನೇಚರ್ ಮಾಡಿದರೆ ಎಲ್ಲರಿಗೂ ಅವಕಾಶ ಕೊಡಲಿಕ್ಕಾಗುತ್ತದೆಯೆ? ಇದರ ಬಗ್ಗೆ ತಮ್ಮ ನಾಯಕರಾದ ನಾಗರತ್ನಮ್ಮನವರೇ ಹೇಳಲಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಹತ್ವವಾದ ವಿಚಾರವಿರುವುದರಿಂದ ಅವಕಾಶ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನಾನು ಕನ್ಸೆಂಟ್ ಕೊಟ್ಟರೆ ಆಗ ಮಾತನಾಡಬಹುದು. ತಾವು ದಯಮಾಡಿ ಕುಳಿತುಕೊಳ್ಳಬೇಕು. ಈಗ ಮೂರು ಜನರು ಮಾತನಾಡಿದ್ದೀರಿ. ನಾನು ಕನ್‌ಸೆಂಟ್ ಕೊಟ್ಟರೆ, ಮಾತನಾಡಿ. ನಾನು ಕನ್‌ಸೆಂಟ್ ಕೊಡದೇ ಮಾತನಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ರೂಲ್ ೧೯೮ರಲ್ಲಿ "A member may, with the consent of the Speaker, raise a question involving a breach of privilege either of member, or the House or of a Committee thereof. Under these three situations, Breach of privilege can be thought of and can be raised. In this particular instance, Notice of Breach of Privilege...

(Interruption)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ನಮ್ಮ ಕಡೆಯವರು ಮಾತನಾಡಿದ ಮೇಲೆ ಅವರು ಉತ್ತರ ಹೇಳಲಿ.

(ಗೊಂದಲ)

ಅಧ್ಯಕ್ಷರು,—ಅವರು ಹೇಳುವಂಥಾದ್ದು ಮುಂಗಿಯಲಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಅವರು ನಮ್ಮ ಡಿಬೇಟ್ಸ್‌ಗೆ ರಿಪ್ಲೈ ಮಾಡುತ್ತಿದ್ದಾರೆ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ನಾನು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ನಮ್ಮ ಕಡೆಯಿಂದ ಬೇರೆಯವರು ಅನೇಕ ಪಾಯಿಂಟ್ಸ್ ಹೇಳುವುದು ಇದೆ.

(ಗೊಂದಲ)

ಅಧ್ಯಕ್ಷರು.— ಈಗ ಮೂರು ಮಂದಿಗಿಂತಲೂ ಹೆಚ್ಚು ಅವಕಾಶ ಕೊಡಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಕುಳಿತುಕೊಳ್ಳುವುದಕ್ಕೆ ತಾವು ತಿಳಿಸಬೇಕು.

(ಗೊಂದಲ)

ಅಧ್ಯಕ್ಷರು.— ಈಗ ಮಾನ್ಯ ಮಂತ್ರಿಗಳು ಬ್ರಿಗೇಡ್ ರೋಡ್ ಬಗ್ಗೆ ಹೇಳುತ್ತಿಲ್ಲ. ಪಾಯಿಂಟ್ ಆರ್ಡರ್ ಬಗ್ಗೆ ಹೇಳುತ್ತಿದ್ದಾರೆ. ದಯಮಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, Rule 190 of the Rules of Procedure and Conduct of Business in the Legislative Assembly refers to three situation under which a Breach of Privilege can be thought of and such a matter could be raised on the floor of the House. When there is a Breach of Privilege of a Member of this House or a Committee of this House or the House itself, a Breach of Privilege can be thought off. In this particular case, it is in the case of Members of this House. This is the point that should be borne in mind while considering the question of Breach of Privilege. In raising a question of privilege on this particular notice, which is given to the Speaker, my formulation of the Point of Order is this. The words attributed to the Hon'ble Chief Minister contained in this Notice of Breach of Privilege do not constitute a Breach of Privilege of the Members of this House. This is my Point of Order In order to substantiate my point, I would like to make my submission.

The notice of Breach of Privilege containing the alleged statement of the Hon'ble Chief Minister, even if it is taken literally to be true in all its entirety criminal implications, they do not constitute the Breach of Privilege of the Members of this House. This is my proposition. And I would like to substantiate point of order. The first thing is, kindly refer to sub clause (2) of rule 192.

"The right to raise a question of privilege shall be governed by the following conditions, namely.—

(ii) the question shall be restricted to a specific matter of recent occurrence."

(Interruption)

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು,—ಅವರೂ ರೂಲ್ ಹೇಳುವುದಕ್ಕೆ ಹತ್ತಿದ್ದಾರೆ, ಕೇಳಿ. ನಿಮಗೆ ರೂಲ್ ಹೇಳುವುದಕ್ಕೂ ಬರುವುದಿಲ್ಲ. ಅವರು ಹೇಳುವುದನ್ನಾದರೂ ಕೇಳಿ. ಅವರು ಏನು ಹೇಳುತ್ತಾರೋ ನೋಡೋಣ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ದಯಮಾಡಿಟ್ಟು ಕೇಳಿ...

MR. SPEAKER.—I have allowed the Hon. Minister.

(ಗೊಂದಲ)

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಮೇಲೆ ನಾನು ಮಾನ್ಯ ಮಂತ್ರಿಗಳನ್ನು ಅಲೋ ಮಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದನ್ನು ನಾನು ಕೇಳಿದ್ದೇನೋ, ಇಲ್ಲವೋ, ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಉತ್ತರವನ್ನು ಕೊಡುವುದಕ್ಕೆ...

MR. SPEAKER.—I have allowed the Hon. Minister.

SRI M. VEERAPPA MOILY.—You have the right to allow but what for? ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೋ ಅಥವಾ ಉತ್ತರವನ್ನು ಕೊಡುವುದಕ್ಕೆ ನಿಂತಿದ್ದಾರೋ?

(ಗೊಂದಲ)

ಅಧ್ಯಕ್ಷರು.—ಈಗ ಷಾರ್ಟ್ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾಗಿದೆ. ೩ ಜನರು ಮಾತನಾಡಿದ್ದಾರೆ. ಚೀಫ್ ಮಿನಿಸ್ಟರ್‌ರವರಿಗೆ ಉತ್ತರವನ್ನು ಹೇಳುವುದಕ್ಕೆ ನಾನು ಕೇಳಿದೆ. ಅಷ್ಟರೊಳಗೆ ಇನ್ನೂ ಕೆಲವರು ನಾವು ಮಾತನಾಡುತ್ತೇವೆಂದು ಹೇಳಿದಿರಿ. ಅವರು ಈಗ ಪಾಯಿಂಟ್ ಆಫ್ ಆರ್ಡರ್ ಏನು ಎತ್ತಿದ್ದಾರೆ ನೋಡೋಣ.

(ಗೊಂದಲ)

ಅಧ್ಯಕ್ಷರು.—ತಾವು ದಯಮಾಡಿಟ್ಟು ಕುಳಿತುಕೊಳ್ಳಿ,

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳುವ ಪ್ರಕಾರ ಅವರು ಎತ್ತಿರುವುದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ಅವರು ಏನು ಹೇಳುತ್ತಾರೆ, ಇದು ಬ್ರೀಚ್ ಆಫ್ ಪ್ರಿವಿಲೇಜ್‌ಗೆ ಬರುವುದಿಲ್ಲ. ಬ್ರೀಚ್ ಆಫ್ ಪ್ರಿವಿಲೇಜ್...

ಅಧ್ಯಕ್ಷರು.—ಶ್ರೀನಿವಾಸ್‌ರವರೇ, ನಾನು ಹೇಳುವುದನ್ನು ಕೇಳುತ್ತೀರೋ ಇಲ್ಲವೋ? ಮಂತ್ರಿಗಳು ಮಾತನಾಡುವುದಕ್ಕೆ ನಾನು ಅಲೋ ಮಾಡಿದ್ದೇನೆ. ಅವರು ಏನು ಹೇಳುತ್ತಾರೋ ಹೇಳಲಿ. ಅವರ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದನ್ನು ಹೇಳಲಿ....

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಪಾಯಿಂಟ್ ಆಫ್ ಆರ್ಡರ್ ಎಂದು ಮಾತನಾಡುತ್ತೇನೆ. I am also on a point of order. ನನಗೂ ಅವಕಾಶವನ್ನು ಕೊಡಿ.

SRI A. LAKSHMI SAGAR.—But let me finish.

MR. SPEAKER.—There cannot be a point of order against the point of order.

SRI K. H. SRINIVAS.—This is not against his point of order.

(Interruption)

ಅಧ್ಯಕ್ಷರು.—ನಾನು ಅವರನ್ನು ಕರೆದಿದ್ದೇನೆ, ಅವರು ಹೇಳಲಿ. ದಯವಿಟ್ಟು ತಾವು ಕೂಡಿ...

(ಗೊಂದಲ)

ಅಧ್ಯಕ್ಷರು.—ಅವರು ರೂಲನ್ನು ಹೇಳುತ್ತಿದ್ದಾರೆ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದರಲ್ಲಿ ಯಾವ ರೂಲು ಇಲ್ಲ, ಏನೂ ಇಲ್ಲ.

ಅಧ್ಯಕ್ಷರು.—ಅವರು ೧೯೨ನೇ ರೂಲನ್ನು ಏನು ಹೇಳುತ್ತಾರೋ ನೋಡೋಣ.

SRI K. H. SRINIVAS.—I am raising a point of order. He is not on a point of order. My point of order should be discussed. ಅವರು ಏನು ಹೇಳುತ್ತಾರೆಂದರೆ, ಇಲ್ಲಿ ನಡೆಯುತ್ತಿರುವ ಡಿಸ್ಕಷನ್‌ನಲ್ಲಿ...

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಅಲ್ಲಿಯವರೆಗೂ ನಾನು ಯಾರನ್ನೂ ಅಲೋ ಮಾಡುವುದಿಲ್ಲ. ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ನಾನು ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಹೇಳಲಿ. ಅದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ ಎಂದು ನೀವು ಹೇಳುತ್ತೀರಿ, ನಾನು ನಿಮಗೂ ಅವಕಾಶವನ್ನು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ, ನೀವು ಇದಕ್ಕೆ ಪರ್ಮಿಷನ್ ಕೊಡಬೇಡಿ ಎಂದು ಹೇಳುವ ಕನ್‌ಕ್ಲೂಷನ್‌ಗೆ ಅವರು ಬಂದಿದ್ದಾರೆ, ಅದಕ್ಕೇ ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಇದು ಬ್ರೀಚ್ ಆಫ್ ಪ್ರಿವಿಲೇಜ್ ಅಲ್ಲವೆ? ಶಾಸಕರಿಗೆ ಇನ್‌ಸಲ್ಟ್....

(ಗೊಂದಲ)

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೆ ನಿಮಗೆ ಅವಕಾಶವನ್ನು ಕೊಡಬಾರದು ಅಂತಲೂ ಅವರು ಹೇಳಬಹುದು,...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದು ಯಾವಾಗ ಹೇಳಬಹುದು. ಈಗಲ್ಲ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ನೋಟೀಸ್‌ನಲ್ಲಿರತಕ್ಕಂಥ ವಿಚಾರ ಅದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಾರೋ ಅದನ್ನು ಹೇಳಿ ಬಿಡಲಿ. ನೀವು ಏತಕ್ಕೆ ಈ ರೀತಿ ಮಾತನಾಡುವುದು. ? ಸಿಟ್ಟಿನಿಂದ ಈ ರೀತಿ ಮಾತ ನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಿಮ್ಮ ಕಡೆಯವರಿಗೆ ಮೂರು ಜನ ಸದಸ್ಯರಿಗೂ ಅವಕಾಶ ಕೊಟ್ಟಿದ್ದೇನೆ. ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೇನೆ, ನೀವು ಕುಳಿತುಕೊಳ್ಳಿ

ಶ್ರೀ ಧರ್ಮಸಿಂಗ್.—ಅವರು ವಿಷಯವನ್ನು ಡೈವರ್ಟ್ ಮಾಡಲಿಕ್ಕೆ ಹೋಗಿದ್ದಾರೆ.

ಅಧ್ಯಕ್ಷರು.—ನಾನು ಎರಡು ಪಕ್ಷದವರ ಮಾತುಗಳನ್ನು ಕೇಳಿದ್ದೇನೆ.

ಶ್ರೀ ಬಿ. ರಾಚಯ್ಯ.—ಪಾಯಿಂಟ್ ಆಫ್ ಆರ್ಡರ್ ಎತ್ತಿದ ಮೇಲೆ ಮಾನ್ಯ ಅಧ್ಯಕ್ಷರ ಪರ್ಮಿಷನ್ ತೆಗೆದುಕೊಂಡೇ ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಪ್ರತಿ ಪಕ್ಷದ ಸದಸ್ಯರು ಅವರು ಕುಳಿತು ಕೊಳ್ಳುವುದೇ ಇಲ್ಲ. ನಾನು ಏನು ಮಾಡಲಿ. ನಾನು ಮೊದಲು ಹೇಳುತ್ತೇನೆ, ಅವರು ಆ ಮೇಲೆ ಹೇಳಲಿ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ತಾವು ಏನಾದರೂ ಪಾಯಿಂಟ್ ಆಫ್ ಆರ್ಡರ್ ಮೇಲೆ ಹೇಳ ಬೇಕಿದ್ದರೆ ಆ ಮೇಲೆ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ನನ್ನ ಪಾಯಿಂಟ್ ಆಫ್ ಆರ್ಡರ್‌ನ್ನು ಸ್ವಲ್ಪ ಮಾನ್ಯ ಸದಸ್ಯರು ಕೇಳಲಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ he is raising a point of order there are rules governing to raise of a point of order, Kaul & shakdher.

Interrvptiou

ಅಧ್ಯಕ್ಷರು.—ನಿಮಗೂ ಅವಕಾಶ ಕೊಡುತ್ತೇನೆ. ಪಾಯಿಂಟ್ ಆಫ್ ಆರ್ಡರ್ ಇಲ್ಲ ಎಂದು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ಹಕ್ಕುಚ್ಯುತಿ ಆಗುವುದಕ್ಕೆ ಇದರಲ್ಲಿ ಅವಕಾಶ ವಿಲ್ಲ. ಅವರು ತಂದಿರತಕ್ಕಂಥ ಹಕ್ಕುಚ್ಯುತಿ ನೋಟೀಸ್‌ನ್ನು ನೀವು ಪ್ರಾರಂಭದಲ್ಲಿಯೇ ಅದನ್ನು ತಳ್ಳಿ ಹಾಕಬಹುದಾಗಿತ್ತು, ಇದರಲ್ಲಿ ಯಾವ ಕಾರಣವೂ ಇಲ್ಲವೆಂದು ಹೇಳಿ, ಇದೇ ನನ್ನ ಪಾಯಿಂಟ್ ಆಫ್ ಆರ್ಡರ್.

MR SPEAKER.—Let him Substantiate his point of order.

ಶ್ರೀ ಎ. ಲಕ್ಷ್ಮೀಸಾಗರ್.—ಕಾರಣವೇನೆಂದು ಹೇಳುತ್ತೇನೆ. ಇದನ್ನು ಅವರು ಬಹಳ ತಡವಾಗಿ ತಂದಿದ್ದಾರೆ. ನಿಯಮ ೧೯೨ ರ ಪ್ರಕಾರ

"The question shall be restricted to a specific matter of recent occurrence?

You may not agree with me. Please let him have a patient hearing. I have heard you with all respect, with all Considerations.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ಇದು ಪಾಯಿಂಟ್ ಆಫ್ ಆರ್ಡರ್‌ಗೆ ರಿಪ್ಲೈ ಏನು ?

ಶ್ರೀ ಎ. ಲಕ್ಷ್ಮೀಸಾಗರ್.—ರಿಪ್ಲೈ ಅಲ್ಲ ಮಾನ್ಯ ಧರ್ಮಸಿಂಗ್‌ರವರೇ ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಈ ರೀತಿ ಪತ್ರಿಕೆಗಳಲ್ಲಿ ವಿರುದ್ಧ ವಾಗಿ ಆಗಿರತಕ್ಕಂಥ ಸ್ಟೇಟ್‌ಮೆಂಟ್. ಇದು ಬಹಳ ಅನ್ಯಾಯ. ದಯವಿಟ್ಟು ತಾವು ಕುಳಿತು ಕೊಳ್ಳಿ.

ಅಧ್ಯಕ್ಷರು.—ನೀವು ಕುಳಿತು ಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಇದು ಸರಿಯಾದ ರೀತಿಯಲ್ಲ. ಈ ರೀತಿ ಇಂಟರಪ್ಟ್ ಮಾಡುವುದು ಒಳ್ಳೆಯದಲ್ಲ Let him substantiate his point of order.

(ಗೊಂದಲ)

೪–೩೦ ಪಿ. ಎಂ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲವೆಂದು ಆ ಮೇಲೆ ಬೇಕಾದರೆ ಮೊಯಿಲಿ ಯವರು ಹೇಳಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಲೇಟ್ ಆಗಿ ತಂದಿದ್ದಾರೆ. ಇದಕ್ಕೆ ತಾವು ಮಾನ್ಯತೆ ಕೊಡಬಾರದು. ಪತ್ರಿಕೆಯಲ್ಲಿ ಬಂದಿರತಕ್ಕ ಹೇಳಿಕೆ.........

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಇದು ಬಹಳ ಅನ್ಯಾಯ. Let me have my say.

ಅಧ್ಯಕ್ಷರು.—ನಾನು ಅವಕಾಶ ಕೊಟ್ಟಿರುವುದು ಪಾಯಿಂಟ್ ಆಫ್ ಆರ್ಡರ್ ಹೇಳುವುದಕ್ಕೆ Let him Substantiate his point of Order. ಆ ಮೇಲೆ ಬೇಕಾದರೆ ವೀರಪ್ಪ ಮೊಯ್ಲಿಯವರು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲವೆಂದು ಹೇಳಲಿ.

(ಗೊಂದಲ)

ಅಧ್ಯಕ್ಷರು.—ಕಾನಡೆಯವರೆ, ಚಿನ್ನಪ್ಪನವರೆ, ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಹೇಳಲಿ ತಾವು ಕುಳಿತು ಕೊಳ್ಳಿ ಅವರದ್ದು ಆದ ಮೇಲೆ ಹೇಳುವಿರಂತೆ.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮೊಯ್ಲಿಯವರು ಅವರ ಹೇಳಿಕೆ ಪ್ರಕಾರ ಈ ಮಾನ್ಯ ಸಭೆಯ ಸದಸ್ಯರಿಗೆ ಅವಮಾನವಾಗಿದೆ, ಗೌರವಕ್ಕೆ ಕುಂದು ಬಂದಿದೆ ಎಂದು ಹೇಳಿದ್ದಾರೆ. ಮೊಯ್ಲಿಯವರು ಮತ್ತು ಖರ್ಗೆಯವರು ಕಾಲ್ ಅಂಡ್ ಶಕ್ಧರ್‌ನ ೧೭೭ ಮತ್ತು ೧೭೮ನೇ ಪುಟದ ಬಗ್ಗೆ ಹೇಳಿದ್ದಾರೆ.

(ಗೊಂದಲ)

SRI A LAKSHMISAGAR.—According Kaul & Shakdher in page no. 224, it is as follows.

"In order to constitute a breach of privilege, however, a libel upon a member of parliament must concede his character or conduct in the capacity as a member of the House and must be based on matters arising in the actual transaction of the business of the House.

May I read the second sentence. Again Sri Moily and Kharge have read. You are entitled to say that you do not agree with me. But, you shall not say that I shall not speak.

SRI M. VEERAPPA MOILY.—You must speak under the rules. you cannot violate the rules. because you are the parliamentary Affairs Minister. You must give a lead by abiding by the rules. you are violating the rules.

SRI A. LAKSHMISAGAR.—I am not violating the rules. I am not violating the rules.

SMT. K. S. NAGARATHNAMMA.—ಅಧ್ಯಕ್ಷರೇ... ..

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲವೆಂದು ಬೇಕಾದರೆ ಆ ಮೇಲೆ ಹೇಳುವಿರಂತೆ.

SRI A. LAKSHMISAGAR.—You have read only that portion which is convenient to you. It is not proper. I must place both the aspects before the Speaker. Sri Moily conveniently read only the introductory portion of the matters dealing with the breach of

privilege. Kaul and Shakdher has dealt with this matter differently and in an elaborate manner, and the explanation and the commentary bearing on the present question is under the controversy or under the discussion is the point Only one paragraph. I should like to read, Sri Moily has conveniently read. I am reading your own sentence. on page No. 177 and 178.

> " If it concesns the House as such. Inside or outside the House if an allegation is made against the Members of the House touching their working and all that would constitute breach of privilege. "

That is what you have said. That is on old. one That is an 16 th or 17th century interpretaton. Much water has flown under the bridge. Please see first paragraph of page No. 224,

Interrvption

MR. SPEAKER.—He is reading page No. 224.

SRI A. LAKSHMISAGAR.—Mr. Speaker, the first sentence is :

> "In order to constitute a breach privilege, however, a libel upon a member of Parliament must concern his character or conduct in his capacity as a member of the House and must be based on matters arising in the actual transaction of the business of the House."

The statement attributed to the Hon. Chief Minister does not concern to the business of the House actually transacted within this House. This is the point I should like to make.

> "Reflections upon members otherwise than in their capacity as members do not, therefore. involve any breach of privilege or contempt of the House."

Please note this.

> "Reflections upon members otherwise than in their capacity as members do not, therefore, involve any breach of privile_e or contempt of the House. Similarly, speechef or writings containing vague charges against members or criticising their parliamentary conduct in a strong language particularly in the heat of the public controversy, without. however imputing any mala-fides, are not treated by the House as a contempt or breach of privilege."
>
> On a similar consideration, defamatory words against a particular section of the House or against..."

This is the first point. The first point is not inside or outside. That is an old interpretation. That is gone.

> "In order to constitute a word constituting breach of privilege, must concern to the functioning of the Members of the House within the House in discharge of their functions."

This is the first submission, by way of my Point of Order saying that the notice of breach of privilege does not have any legs to stand upon.

> "On a similar consideration, defamatory matters are not general. They are made against a section of the Members of the House."

'A section of the House'.—Even admittedly according to the notice if some statements are made about the Members of the House or – a section of the Members of the House they do not also constitute a breach of privilege.

> "...of a class of person if defamatory statements are made about..."

'Class of person' or 'a section of the House'...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೆ, ಹಾಗಾದರೆ ಮಾನ್ಯ ಮುಖ್ಯಮಂತ್ರಿಗಳು ಆ ಸೆಕ್ಷನ್ ಮೆಂಬರ್ಸ್ ಬಗ್ಗೆ ಮಾತ್ರ ಹೇಳಿದರು ಎಂದು ನಾವು ತಿಳಿಯಬೇಕೇ?.

ಅಧ್ಯಕ್ಷರು.—ಅದಕ್ಕೆ ಮೊಯಿಲಿಯವರು ಉತ್ತರ ಹೇಳುತ್ತಾರೆ.

SRI A. LAKSHMISAGAR.—For the second point they do not constitute breach of privilege.

> "On a similar consideration, defamatory words against a particular section of the House or against a particular party in the House are not treated as constituting a contempt of the House."

Please note Mr. Speaker Sir:—

> "...section of the House or against a particular party in the House are not treated as constituting a contempt of the House, since the whole House is not affected."

This is not mine. Please note this. You may disagree. But, let me say what the history of breach of privilege is and how these matters are dealt with in Lok Sabha and other legislatures of the country and even outside.

This is the second point. If the alleged statement constituting breach of privilege concerns only a section of the House or a party in the House such words do not constitute breach of privilege. This is

the latest legal position of the interpretation of the matters concerning breach of privileges of Members of the House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲಿಯವರೆಗೆ ಹೋಗುವುದು ಅಧ್ಯಕ್ಷರೆ ? ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಎಷ್ಟು ಹೊತ್ತು ಮಾತನಾಡುವುದು ?

ಅಧ್ಯಕ್ಷರು.—ನೀವು ಮೂರು ಜನ ಏನು ಹೇಳಿದಿರಿ ಅದರ ಬಗ್ಗೆ ಅವರು ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ೧೯೫೦ ರಿಂದ ೧೯೭೦ನೇ ಇಸವಿವರೆಗೆ ಕೋಡಿಫೈಡ್ ಆಗಿರತಕ್ಕ ನಿರ್ಣಯ. ಬ್ರೀಚ್ ಆಫ್ ಪ್ರಿವಿಲೈಜ್ ಹೇಗೆ ಅರೈಸ್ ಆಯಿತು ಎಂಬುದನ್ನು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಗೋಪಾಲಗೌಡರದ್ದನ್ನು ಹೇಳುತ್ತಿದ್ದಾರೆ.

MR. SPEAKER.—I will hear Sri Moily and then I will give the ruling.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಹತ್ತಿರ ಇರತಕ್ಕದ್ದು ಲೇಟೆಸ್ಟ್ ಕಾಪಿ.

"On December 7th, 1967 Hon. Member Sri P. B. Ithal raised"

(INTERRUPTION)

This is Aithal's case. On December 7th 1970 the point was,—"The question of parliamentary privilege has to be kept clear from courtesies or party alignments. Parliamentary privilege is uncontrolled by bonafides or malafides. A privilege is an exception to the normal rule It is a special position afforded to the members of the legislature; that privilege is called parliamentary privilege.' I don't read all that. But, "While considering the question as to whether the parliamentary privilege extends beyond the limits of the House of Legislature, the aspect arose with regard to what happens outside the precincts of the House. Parliamentary privilege extends only to parliamentary proceedings and not beyond."

So the statement attributed to the hon. Chief Minister is a statement about which you are complaining is the statement admittedly made not on the floor of the House nor within the precincts of the House viz., the lobby. It is made outside concerning his party legislators. If the statement alleged is a defamatory and concerns a section of the House or party members in the House, those words do not constitute breach of privilege. This is our own decision. There are two more incidents. Sri Rajagopala Chari......

(INTERRUPTION)

ಅಧ್ಯಕ್ಷರು.—ಅವರದ್ದು ಆದ ಮೇಲೆ ಶ್ರೀಮಾನ್ ಮೊಯಿಲಿಯವರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ದಾನ ಧರ್ಮ ಅಲ್ಲ. ಇಲ್ಲಿ ಯಾರೇ ಒಬ್ಬರಿಗೆ ಅವಕಾಶ ಕೊಡುವ ಪ್ರಶ್ನೆಯಿಲ್ಲ. ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಲಿಕ್ಕೆ ನಮಗೆ ಹಕ್ಕು ಇದೆ. He is qouting all the books. Hon. Speaker may also allow us. We will also speak.

ಅಧ್ಯಕ್ಷರು.—ಇದಕ್ಕೆ ಸಂಬಂಧವೇ ಇಲ್ಲವೆಂದು ಮೊದಲೇ ಹೇಳಿಬಿಡಬಹುದಾಗಿತ್ತು. ಆದರೆ ಅದಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ ವಿಷಯದ ಬಗ್ಗೆ ಪೂರ್ವಭಾವಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಅದರಲ್ಲಿ ಅವರು ಪಾಯಿಂಟ್ ಆಫ್ ಆರ್ಡರ್ ರೇಸ್ ಮಾಡಿದ್ದಾರೆ. There is an expert advocate here also.

ಶ್ರೀಮತಿ ಕೆ. ಎಸ್ ನಾಗರತ್ನಮ್ಮ.—ಅವರ ಒಂದೇ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಎಷ್ಟು ಕೋಟ್ ಮಾಡುವುದು ? ಇಷ್ಟೊಂದು ಕೋಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ.

MR. SPEAKER.—I must hear both the sides. ನಾನು ನಿಮಗೂ ಅವಕಾಶ ಮಾಡಿಕೊಡುತ್ತೇನೆ.

(Interruption)

MR. SPEAKER.—The hon. Minister is not speaking about Brigade Road.

(Interruption)

SRI A. LAKSHMISAGAR.—Sri R. K. Kadilkar raised a question of breach of privilege on 20th April in respcet of......

(Interruption)

MR. SPEAKER.—I will give opportunity to Mr. Moily Veerappa also.

ಶ್ರೀ ಬಿ. ರಾಚಯ್ಯ.—ಅವರು ಅದನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬಂದಿದ್ದಾರೆ. ಎಲ್ಲರೂ ಆ ರೀತಿ ಓದಿಕೊಂಡು ಬರುವುದಕ್ಕಾಗುವುದಿಲ್ಲ. ಅವರು ಹೇಳುವುದನ್ನು ಕೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಪ್ರೊಫೆಸರ್ ಎಂಬುದು ಗೊತ್ತು. ಅವರು ಕ್ಲಾಸ್ ಮಾಡಿ ನಮ್ಮನ್ನು ಕರೆಯಲಿ, ಆಗ ನಾವು ಸಂತೋಷದಿಂದ ಹೋಗಿ ಅವರ ಪಾಠವನ್ನು ಕೇಳುತ್ತೇವೆ. ಆದರೆ ಈಗ ನೀತಿಗೆಟ್ಟ ಸಂಪ್ರದಾಯವನ್ನು ಉಂಟು ಮಾಡುತ್ತಿದ್ದೀರಿ. ಅದು ಪಾಯಿಂಟ್ ಆಫ್ ಆರ್ಡರಾ ?

MR. SPEAKER.—Point of order he has to substantiate.

SRI A. LAKSHMISAGAR.—Mr. Kadilker raised a question of breach of privilege in respect of the speech of Sri Rajagopalachari.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಅವರು ಎಲ್ಲವನ್ನೂ ಕೋಟ್ ಮಾಡುತ್ತಿದ್ದಾರೆ.

MR. SPEAKER.—I have permitted the hon. Minister. Let him speak on the point of order ಅವರು ಮಾತನಾಡಲಿ. ನಂತರ ವೀರಪ್ಪಮೊಯಿಲಿಯವರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ.

SRI M. MAILLIKARJUNA KHARGE.—He is going into the merit of the case.

MR. SPEAKER.—He is not going into the merit.

SRI M. P. PRAKASH.—He is speaking about the admissiblity of the case.

SRI A. LAKSHMISAGAR.—Mr. Kadilkar raised the question of braech of privilege in respect of the speech of Sri Rajagopalachari

upon the veracity or otherwise of the press correspondent. This is the speach of Sri Rajagopalachari made at Chandigarh on 24th March, 1960 published in the Indian Express of 26th March.

> "Mr. Rajagopalachari said that its (Congress) representatives in the legislature were such people whom any first clase Magistrate would round up. They wera men without any ostensible means of livelihood"

The question of breach of privilege was raised, but it was disallowed.

The other one is :

> "A similar question arose in the House of Commons on 21st June, 1954 when a member, Sir H. Williams, brought to the notice of the speaker the following portion of a speech attributed to another member, Mr. Shinwell, appering in that day's Daily Mail :
>
> 'Mr. E. Shinwell. Socialist M. P. predicted an election at the end of the year when he spoke at Labour Party Gala. He said it would be an opportunity to get rid of the crazy Tories the wretches, the rascals, the rapscallions.'

"Repscallions", the dictionery meaning is Rascal, Rogue, Scamp. These are the words used.

(Interruption)

ಅಧ್ಯಕ್ಷರು.—ನಾನು ಇವರ ಕ್ರಿಯಾಲೋಪ ಕೇಳಿದ ಮೇಲೆ ಮೊಯ್ಲಿಯವರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ.

SRI A. LAKSHMISAGAR.—The Hon. Speaker of the Lok Sabha, therefore, told the members that they should not be too touchy as often each party attacks the other party. It was stated in another case in the commons.

> "The rule is that when imputations are made, in order to raise a question of privilege, the imputation must refer to the action of honourable members in the discharge of their duties in the actual transaction of the business of this House."

This is the point you should bear in mind. The last point I should like to make is......

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಯಾವ ಪಾಯಿಂಟ್ ಆಫ್ ಆರ್ಡರ್ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಮಾನ್ಯ ವೀರಪ್ಪ ಮೊಯಿಲಿಯವರು ಅದಕ್ಕೆ ಉತ್ತರ ಕೊಡುತ್ತಾರೆ.

SRI A. LAKSHMISAGAR.—The last example is thus. This is bone out again from the Law of Parliamentary Privileges in India. Every common ground of contempt of the House throw an affront to the dignity in casting reflections. or...There may again be number of ways in which reflections may be cast on the House of Commons. There are few cases illustrating in what circumstances the House can consider the act as contempt of the House......

(Interruptions)

SRI M. MALLIKARJUNA KHARGE.—He cannot go on quoting......

ಅಧ್ಯಕ್ಷರು.— ಅವರು ಏನು ಹೇಳುತ್ತಾರೆ ಸ್ವಲ್ಪ ಕೇಳಿ. ನೀವು ರೂಲ್ ಕೋಟ್ ಮಾಡಿ. ನಾನು ವೀರಪ್ಪಮೊಯಿಲಿಯವರನ್ನು ಕೇಳುತ್ತೇನೆ, ದಯವಿಟ್ಟು ಕೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ...........

ಅಧ್ಯಕ್ಷರು.—ಕಾನಡೆಯವರೇ ತಾವು ಹೊಸಬರಿದ್ದೀರಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ನಾವು ಏನು ಹೇಳುತ್ತೇವೆ ಎನ್ನುವುದನ್ನು ನೀವು ಕೇಳುವುದಿಲ್ಲ. ಇದು ಸರ್ವಾಧಿಕಾರವಾಯಿತು.

(ಗೊಂದಲ)

SRI A. LAKSHMISAGAR.—The governing principle is ... .

(Interruption)

ಅಧ್ಯಕ್ಷರು.—ಮಾನ್ಯ ಲಕ್ಷ್ಮೀಸಾಗರ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಹೇಳುವುದನ್ನು ನೀವು ಕೇಳಿರಿ. ನಿಮಗೂ ಅವಕಾಶ ಕೊಡುತ್ತೇನೆ. ಅವರು ಸಬ್‌ಸ್ಟ್ಯಾನ್ಶಿಯೇಟ್ ಮಾಡುತ್ತಿದ್ದಾರೆ ದಯವಿಟ್ಟು ಕೇಳಿ. I will hear Mr. Veerappa Moily also.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ, ದಯಮಾಡಿ ಒಂದು ನಿಮಿಷ.

SRI K. H. PATIL.—Are you accepting his point of order ?

ಅಧ್ಯಕ್ಷರು.—ನಾನು ಇನ್ನೂ ಅಕ್ಸೆಪ್ಟ್ ಮಾಡಿಲ್ಲ, ರೂಲಿಂಗೂ ಕೊಟ್ಟಿಲ್ಲ.

SRI K. H. PATIL.—If you accept this point of order the whole House will have to use the words rascal, badmash and every thing. Is it the to way argue ?

ಅಧ್ಯಕ್ಷರು.—ಅವರು ಪುಸ್ತಕದಲ್ಲಿರುವುದನ್ನು ಹೇಳುತ್ತಿದ್ದಾರೆ. ಪುಸ್ತಕದಲ್ಲಿ ಏನು ಬರೆದಿದ್ದಾರೆ ಅದನ್ನು ಹೇಳುತ್ತಿದ್ದಾರೆ.

SRI A. LAKSHMI SAGAR.—As a general application of this principle it may be quoted from the Time case in which allegation by Times in 1987 that certain members "draw their living from steady perpetration of crimes for which civilisation demands the gallows" was held not to constitute contempt because the remark had been specifically referred to the actions of members in the discharge of their duties as much. "Draw their living from steady

perpetration of crimes for which civilisation demands gallows''. ಈ ಶಬ್ದವನ್ನು ಅವರ ಮೇಲೆ ಉಪಯೋಗಿಸಿದರೂ, ಅಷ್ಟಾದರೂ ಕೂಡ ಅದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ. ಸ್ವಾಮಿ, ನನ್ನ ಉದಾಹರಣೆಗಳ ಮುಖಾಂತರ ತಮ್ಮ ಮುಂದೆ ಎರಡು ಮುಖ್ಯವಾದಂತಹ ಅಭಿಪ್ರಾಯಗಳನ್ನು ಹೇಳಿದ್ದೇನೆ. ಮೊದಲನೆಯದು ಬ್ರೀಚ್ ಆಫ್ ಪ್ರಿವಿಲೇಜ್ ಆಗಬೇಕಾದರೆ ಒಂದು ಸೆಕ್ಷನ್‌ನ ಹೌಸ್‌ನಲ್ಲಾಗಲೀ ಅಥವಾ ಪಾರ್ಟಿಮೆಂಬರ್ಸ್‌ಗಾಗಲೀ ಹೇಳಿದ ಮಾತುಗಳು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ. ಎರಡನೆಯದು ಬ್ರೀಚ್ ಆಫ್ ಪ್ರಿವಿಲೇಜ್‌ನಲ್ಲಿ ಹೊರಗಡೆ ಎಲ್ಲೋ ಹೇಳಿದ್ದುದು, ಇದು ನನ್ನದಲ್ಲ ಲೋಕಸಭೆಯಲ್ಲಿ ಆದದ್ದು. ಮನೆಯಿಂದ ಹೊರಗಡೆ ಹೇಳಿದ ಶಬ್ದಗಳು ಅಥವಾ ವಾಕ್ಯಗಳು ಸ್ಟೇಟ್‌ಮೆಂಟ್ಸ್ ಈ ಮನೆಯ ಕೆಲಸಕ್ಕೆ ಸಂಬಂಧಪಡದೇ ಇರತಕ್ಕ ಅವರವರು ಮಾಡತಕ್ಕ ಅಂದರೆ ಸದಸ್ಯರು ಮಾಡತಕ್ಕ ಕೆಲಸಕಾರ್ಯಗಳ ಬಗ್ಗೆ ಸಂಬಂಧಪಡದೇ ಇರತಕ್ಕ ವಿಚಾರವಾದರೆ ಅದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ. ನಮ್ಮ ಸ್ನೇಹಿತರು ಹೇಳಿದಹಾಗೆ ಇದು ಡಿಸ್‌ಚಾರ್ಜ್ ಆಫ್ ಡ್ಯೂಟೀಸ್‌ಗೆ ಅದು ಬರುವುದಿಲ್ಲ. ನಮ್ಮ ಸ್ನೇಹಿತರು ಏನು ನೋಟೀಸ್ ಕೊಟ್ಟಿದ್ದಾರೆ ಅವರು ರಾಜಕೀಯ ಬಡತನದಿಂದ ಬಳಲುತ್ತಿದ್ದಾರೆ, ಇನ್ನೇನೂ ಬೇರೆ ಇಲ್ಲ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರೇ ರಾಜಕೀಯ ಬಡತನದಿಂದ ಬಳಲುತ್ತಿದ್ದಾರೆ, ಇವರು ಚಿಂದಿ ಚಿಂದಿಯಾಗಿ, ಪುಡಿ ಪುಡಿಯಾಗಿ ರಾಜಕೀಯ ಮಾಡುತ್ತಿದ್ದಾರೆ, ಇವರು ನಾಚಿಕೆಯಿಲ್ಲದೆ ಮಾತನಾಡುತ್ತಿದ್ದಾರೆ.

SRI A. LAKSHMI SAGAR.—There is no breach, there is much less breach of privilege. The notice of breach of privilege the least thing that could be done is to throw it out lock stock and barrel.

(ಗೊಂದಲ)

ಶ್ರೀ ಕೆ. ಎಸ್. ನಾಗರತ್ನಮ್ಮ,—ನೋ, ನೋ. ಇವರು ದೊಡ್ಡ ಪ್ರೊಫೆಸರ್ ಎನ್ನುವುದು ನಮಗೆ ಗೊತ್ತು. ಇವರು ರಾಜಕೀಯ ಬಡತನದಿಂದ ಬಳಲುತ್ತಿದ್ದಾರೆ, ಇವರೇ ರಾಜಕೀಯದಲ್ಲಿ ಗಡ ಗಡ ಅಂತ ನಡುಗುತ್ತಿದ್ದಾರೆ.

MR. SPEAKER.—On the point of order I have not yet given my ruling. I will hear Mr. Veerappa Moily also.

ಶ್ರೀ ಎಂ. ವೀರಪ್ಪ ಮೊಯಿಲಿ,—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ಇಲ್ಲಿ ಒಂದು ಹಕ್ಕುಚ್ಯುತಿಯನ್ನು ಎತ್ತಿದ್ದಕ್ಕೆ ಪಾಯಿಂಟ್ ಆಫ್ ಆರ್ಡರ್ ಎತ್ತಿ ನಮ್ಮನ್ನು ಬ್ರಿಗೇಡ್ ರೋಡ್‌ನಿಂದ ಹಾಲಿವುಡ್‌ಗೆ ಮತ್ತು ಇಂಗ್ಲೆಂಡಿನ ಲಂಡನ್ ಹೌಸ್ ಆಫ್ ಕಾಮನ್ಸ್ ತನಕ ನಮ್ಮನ್ನು ಕರೆದುಕೊಂಡುಹೋದರು. ಅಧ್ಯಕ್ಷರೇ ತಮಗೇ ಗೊತ್ತಿದೆ, Case to case there is difference. There is no question of point of order. Accroding page-797 of Kaul & Shakdher :

> "Any member can and should invite Speaker's immediate attention to any instance of what he considers a breach of order or transgression of any law of the House......"

ಈ ಮನೆಯ ಕಾನೂನು ಎಲ್ಲಿ ಉಲ್ಲಂಘನೆಯಾಗಿದೆ ? ಅದನ್ನು ಉಲ್ಲಂಘಿಸಿ ನಮಗೆ ಏನಾದರೂ ಅನುಮತಿಯನ್ನು ಕೊಟ್ಟಿದ್ದೀರಾ ? ಅದು ಏನೂ ಕೊಟ್ಟಿಲ್ಲ.

> "Written or unwritten, the point of order should therefore relate to the interpretation or enforcement of the rules of procedure and conduct of business in the House."

ರಿಟನ್ ಆರ್ ಅನ್‌ರಿಟನ್ ಎಲ್ಲಿ ಆಗಿದೆ ? ಆಮೇಲೆ ೭೯೭ನೇ ಪುಟದಲ್ಲಿ ಹೀಗೆ ಹೇಳಿದೆ.—

Then, according to page-799 the point of order must refer to the procedure and not to substantiate argument on any motion, resolution or question. What he has done ? He has substantiated his point of view. They have given point of order colour to this. It cannot be used as an argument to subestantiate his point of view on a particular motion or issue before this House. ಈಗ ಪಾಯಿಂಟ್ ಆಫ್ ಆರ್ಡರ್‌ನಿಂದ ಏನು ಸವಲತ್ತು ಇದೆ, ಈ ಸದನದ ನಿಯಮವನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಇದೆ, ಈ ಕಾನೂನನ್ನು ಸಂಪೂರ್ಣವಾಗಿ ಟ್ವಿಸ್ಟ್ ಮಾಡಿಕೊಂಡು ನಮ್ಮ ಸಚಿವರು ಇವತ್ತು ಹೇಳಿದ್ದಾರೆ. ಮತ್ತೆ ಏನು ಹೇಳಿದ್ದಾರೆ ಎಂದರೆ ಈ ಸದನದ ಹೊರಗಡೆ ಹೇಳಿಕೆ ಕೊಟ್ಟರೆ ಅದು ಹಕ್ಕುಚ್ಯುತಿ ಆಗುವುದಿಲ್ಲ ಎಂದು. ನೀವು ಈ ಪ್ರಿಸಿಡೆಂಟ್‌ಗೆ ಇಂಗ್ಲೇಡಿಗೆ ಹೋಗಬೇಕಾಗಿಲ್ಲ... ..

ಶ್ರೀ ರಾಮಕೃಷ್ಣ ಹೆಗಡೆ.—ಬ್ರಿಗೇಡ್ ರೋಡ್‌ಗೆ ಹೋಗಬೇಕು.

(ಸಭೆಯಲ್ಲಿ ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಓಡಾಡುತ್ತಿದ್ದೀರಿ ಬ್ರಿಗೇಡ್ ರೋಡೇ ಈಗ ನಿಮ್ಮನ್ನು ಸುತ್ತಿಕೊಂಡಿದೆ ನಿಮ್ಮದು ಮೈನಾರಿಟಿ ಗವರ್ನಮೆಂಟ್

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮಲ್ಲಿ ಏನೂ ಬಂಡವಾಳ ಇಲ್ಲ, ಬ್ರಿಗೇಡ್‌ರೋಡ್, ಮೈನಾರಿಟಿ ಗೌವರ್ನಮೆಂಟ್, ಇಷ್ಟನ್ನೇ ಇಟ್ಟುಕೊಂಡಿದ್ದೀರಿ. ನಿಮ್ಮಲ್ಲಿ ಇದನ್ನು ಬಿಟ್ಟರೆ ಬೇರೆ ಏನೂ ಬಂಡವಾಳವೇ ಇಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಮುಖ್ಯಮಂತ್ರಿಗಳು ಬ್ರಿಗೇಡ್ ರೋಡಿಗೆ ದಾರಿ ತೋರಿಸಿದ್ದಾರೆ. ಅಲ್ಲಿಂದ ಮುಂದೆ ಎಲ್ಲಿಗೆ ಕೊಂಡೊಯ್ಯುತ್ತಾರೋ ನೋಡಬೇಕು. ಅದು ಅವರಿಗೆ ಬಿಟ್ಟಿದ್ದು.

I will read from page 243 from Kaul and Shakdher :

"On March 26, 1959, a member drew the attention of the House to a news item appearing in SAMAO, an Oriya daily of Bhubaneshwar in its issue of March 18, 1959, wherein the Chief Minister of Orissa was alleged to have cast sweeping and general remarks against members of Parliament. The Member said that the Chief Minister of Orissa and the Editor of Samaj might be called to the bar of the House to explain their conduct or, in the alternative, the matter might be referred to the Committee of Privileges for investigation and report.

While refusing his consent for the reason that each House is supreme as far as its own proceedings are concerned, the Speaker ruled.

If really the hon.Chief Minister has said what he is alleged to have said, it is regreatable...if it is really true, this ought not to be continued, I hope and trust that this wholesome principle will be followed everywhere-no House

will cast any aspersion and no member will cast any aspersion on any member of the other House or any other House in this way.''

Then Chapter XI and XII, refers to both keeping the standard of this House.

I will read from Page 251, last paragraph. It read thus.

''The House has the right to punish its members for their misconduct. It exercises its jurisdiction of scrutiny over its members for their conduct whether it takes place inside or ou side the House. It has also the power to punish its members for disorderly conduct and other contempts, whether committed within the House or beyond its walls.''

ಏಕೆಂದರೆ ನಮ್ಮ ಪಾರ್ಲಿಮೆಂಟ್ ಸಚಿವರು ಹೇಳಿದರು. ಇದು ಏನೂ ಕಂಟೆಪ್ಟ್ ಆಗುವುದಿಲ್ಲವೆಂದು ಆದರೆ, ಇದರ ಪ್ರಕಾರ ಆಗುತ್ತದೆ.

SRI M.P. PRAKASH.—Whether it is the conduct of the member...

SRI M. VEERAPPA MOILY.—Even if it is committed outside, it attracts the breach of privilage. I said Chapter XI and XII wil have to be read together. According to me, there is some misconduct on the part of membere whether it is outside or otherwise. There is some misconduct on the part of members whether it is dissident MLAs or others. If that is so, punish them, and suppose that allegation is made in a defamatory way, you punish the Hon'ble Chief Minister. That is what I am telling. You can exercise jurisdiction both under Chapters XI and XII. ಇದು ಕ್ಲಿಯರ್ ಇದೆ. ನೀವು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲವೆಂದು ಹೇಳಬಹುದು. ನಿಮಗೆ ಯಾವುದೂ ಬ್ರೀಚ್ ಅಲ್ಲ. ಏಕೆಂದರೆ ನಿಮ್ಮ ದೋಣಿ ಪೂರ್ತಿ ಮುಳುಗಿ ಹೋದರೂ ಕೂಡ, ಇನ್ನೂ ಮುಳುಗಿಯೇ ಇಲ್ಲವೆಂದು ಹೇಳತಕ್ಕ ಮನುಷ್ಯರು ನೀವು. ರಾಜಕೀಯ ಬಡತನ ನಮ್ಮದಲ್ಲ, ರಾಜಕೀಯ ಬಡತನ, ಭಂಡತನ ಇವೆಲ್ಲವೂ ಅವರು ಹೇಳಿದ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಬಂದಿದೆ, ರಾಜಕೀಯ ಬಡತನ, ಭಂಡತನ ಈ ಕಡೆ ಅಲ್ಲ ಬಂದಿದ್ದು, ಆ ಕಡೆ ಬಂದಿದ್ದು. ರಾಜಕೀಯ ದಿವಾಳಿತನ ನಿಮ್ಮ ಕಡೆ ಬಂದಿದ್ದು. ಈ ದೇಶದಲ್ಲಿ ವಿಶ್ವದಲ್ಲೇ ನಿಮ್ಮ ವಿರುದ್ಧ ಓಟು ಕೊಟ್ಟರೂ, ನಮ್ಮ ಸರ್ಕಾರ ಇದೆಯೆಂದು ಹೇಳತಕ್ಕಂಥ ಮುಖ್ಯಮಂತ್ರಿಗಳು, ಅಥವಾ ಪಕ್ಷ ಇಡೀ ರಾಷ್ಟ್ರದಲ್ಲಿ ಬೇರೆ ಸಿಕ್ಕುವುದಿಲ್ಲ. ಅಂತಹ ಕೆಲಸವನ್ನು ಇವತ್ತು ಮಾಡಿದೆ. ಇವತ್ತು ನಿಮ್ಮ ದೋಣಿ ಇಬ್ಭಾಗವಾಗಿದೆ, ಒಂದು ತುಂಡು ನೇತುಹಾಕಿಕೊಂಡು ಹೋಗುತ್ತಿದ್ದೀರಿ. ನೀವು ನಮಗೆ ರಾಜಕೀಯ ಬಡತನದ ವಿಷಯ ಹೇಳಬೇಡಿ. ಇಷ್ಟೊಂದು ದಿವಾಳಿ ಎದ್ದು, ಹೌಸ್‌ನಲ್ಲಿ ಕುಳಿತು ನೀವು ರಾಜಕೀಯ ಮಾಡುವುದು ಇದ್ದರೆ, ಅದು ನಿಮಗೆ ಅಂದ, ಚಂದ ಆಗುವುದು ಇದ್ದರೆ, ಅದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ಆದರೆ ಭಿನ್ನಮತೀಯ ಶಾಸಕರಿಗೆ ನೀವು ಬ್ರಿಗೇಡ್ ರೋಡ್ ಎಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳಿಗೆ ಲಕ್ಷ್ಮೀಸಾಗರ್‌ರವರು ಏನು ಹೇಳಿಕೊಡುತ್ತಿದ್ದಾರೆ, ಅವರನ್ನು ಬ್ರಿಗೇಡ್ ರೋಡ್ ಎಂದು ಹೇಳಬೇಡಿ, ಅವರನ್ನು ಇನ್ನೂ ಬೇರೆ ಬೇರೆ ಶಬ್ಧಗಳಿಂದ ಕರೆಯಿರಿ ಅವರನ್ನು rascals or pimps ಎಂದು ಕರೆಯಿರಿ ಎಂದು ಹೇಳಿಕೊಡುತ್ತಿದ್ದಾರೆ?

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಮೇಲೆ ಹೇಳಿರಿ...

ಶ್ರೀ ಧರ್ಮಸಿಂಗ್.—ಇದು ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಅವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಇದನ್ನು ಹೇಳಿದ್ದಾರೆ. ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ ಎಂದು ಹೇಳತಕ್ಕಂಥ ಧಾಟಿ ಒಂದು ಪದ್ಧತಿ, ಒಂದು ಪರಂಪರೆ ಮಾಡಬೇಕೆಂದು ಈ ದೇಶದಲ್ಲಿ ತಾವು ರಾಜಕೀಯ ಮಾಡಿಕೊಂಡು ಹೋಗುತ್ತಿದ್ದೀರಿ. ಇದು ನಿಮಗೇ ಬಿಟ್ಟಿದ್ದು. ಇದು ನಿಮ್ಮ ಫ್ಯೂನರಲ್ ಎಂದು ಹೇಳುವುದಿಲ್ಲ. ಇದು ಫ್ಯೂನರಲ್ ಆಫ್ ಡೆಮಾಕ್ರಸಿ. ಅಷ್ಟೇ.

ಶ್ರೀ ಎಂ. ಪಿ, ಪ್ರಕಾಶ್ (ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು).—ನೇರವಾಗಿ ಇದಕ್ಕೆ ಸಂಬಂಧ ಇಲ್ಲದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದರಿಂದ ಯಾವುದಾದರೂ ಫಲ ಸಿಗುವುದು ಇದ್ದರೆ ಮಾಡಬಹುದಾಗಿತ್ತು. ಆದರೆ ನಾವು ಇಲ್ಲಿ ಸ್ವರತಿಯ ಆನಂದಕ್ಕಾಗಿ ಬಂದಿರುವುದಿಲ್ಲ. ನಿಮ್ಮ ಒಪ್ಪಿಗೆಗಾಗಿ ಇಲ್ಲಿ ಬಂದಿದ್ದೇವೆ. The statement attributed by the Hon'ble Chief Minister, whether it amounts to a misconduct or not is the point here. with regard to what constitutes a point of order, the enforcement of the rules is also point of order. May I drow your attention to 333 which reads thus.

> "A point of order shall relate to the interpretation or enforcement of these rules of such articles of the Constitution as regulate the business of the House and shall raise a question which is within the cognizance of the Speaker."

Therefore, it is well within the congnizance to raise the point and the enforcement of the rules is most important and paramount importance here. Therefore, he is entitled for that.

ಅಧ್ಯಕ್ಷರು.—ವೀರಪ್ಪ ಮೊಯಿಲಿಯವರೇ ಇದಕ್ಕೆ ನೀವೇ ಉತ್ತರ ಹೇಳಿ ಅವರು ಹೇಳಿದರಲ್ಲ ಅದಕ್ಕೆ ನೀವೇ ಉತ್ತರ ಹೇಳಿರಿ,

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ನಾನು ಒಂದೇ ಒಂದು ಮಾತು ಹೇಳುತ್ತೇನೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಡುವುದಕ್ಕಿಂತ ಮುಂಚೆ, ಈ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ರೂಲಿಂಗ್ ಕೊಡಬೇಕು, ಈ ಪಾಯಿಂಟ್ ಆಫ್ ಆರ್ಡರ್‌ನ್ನು ಕಿತ್ತಾದರೂ ಹಾಕಬೇಕು, ಇಲ್ಲ ಎತ್ತಿಹಿಡಿಯಬೇಕು. ಅದರ ಬಗ್ಗೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಏನು ಮಾಡುತ್ತೀರಿ ಎಂಬುದು ನಮಗೆ ಅರ್ಥವಾಗಿದೆ

ಅಧ್ಯಕ್ಷರು.—ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದರೂ ನಾವು ನಿಮ್ಮ ಮಾನ ಒಲಿಸಬೇಕಲ್ಲ.

ಅಧ್ಯಕ್ಷರು.—ನಾನು ಹೇಳಿದ್ದು ಅವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ. ಅವರ ಪಾಯಿಂಟ್ ಆಫ್ ಆರ್ಡರನ್ನು ಎತ್ತಿ ಹಿಡಿಯಬೇಕು, ಇಲ್ಲ ಕಿತ್ತಾದರೂ ಹಾಕಬೇಕು. ಈಗ ಮಾದೇಗೌಡರು ಹಿರಿಯ ಸದಸ್ಯರು ಅವರು ಹೇಳಲಿ. ಅವರು ಆದಮೇಲೆ ಚೀಫ್ ಮಿನಿಸ್ಟರ್‌ರವರು ಹೇಳುತ್ತಾರೆ. ಅವರು ಹೇಳಿದ ಮೇಲೆ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ....ಅಧ್ಯಕ್ಷರೇ, ನಾನು ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡು ವುದಕ್ಕಿಂತ ಮುಂಚಿತವಾಗಿ ಒಂದು ವಿಷಯವನ್ನು ನಾನು ಬಹಳ ನಮ್ರತೆಯಿಂದ ಬಿನ್ನವಿಸಿಕೊಳ್ಳು ವುದಕ್ಕೆ ಇಚ್ಛೆಪಡುತ್ತೇನೆ. ಇದು ಬಹಳ ಮಹತ್ತರವಾದುದು ಇಂತಹ ವಿಷಯಗಳು ಆಗಾಗ ಸಭೆಯಲ್ಲಿ ಬರ ಬೇಕು. ಈ ಸಭೆಯ ಸಂಪ್ರದಾಯ ಎಂದರೆ ವಿರೋಧ ಪಕ್ಷದವರಿಗೆ ಸಂಪೂರ್ಣವಾದ ಅಧಿಕಾರವನ್ನು, ಕಾಲ ವನ್ನು, ಸಾಕಾದಷ್ಟು ದೀರ್ಘವಾದ ಸಮಯವನ್ನು ಕೊಟ್ಟು ಯಾವುದೇ ಒಂದು ವಿಷಯವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವರಿಗೆ ಕೊಡುವುದು, ಬಹಳ ದಿವಸದಿಂದ ಬಂದಿರತಕ್ಕಂಥ ಸಂಪ್ರದಾಯ. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದಲ್ಲಿದ್ದವರು, ಆಡಳಿತ ಪಕ್ಷದಲ್ಲಿದ್ದಂಥವರು, ಈ ದೇಶದಲ್ಲಿ

ಒಬ್ಬ ಪ್ರತಿಭಾವಂತ ವಿರೋಧ ಪಕ್ಷದ ನಾಯಕರು ಎಂಬ ಹೆಸರನ್ನು ಗಳಿಸಿ ಕೊಂಡಿರತಕ್ಕಂಥವರು, ಅವರಿಗೆ ಇದು ಗೊತ್ತು. ಇದನ್ನು ನೀವೂ ಒಪ್ಪಿಕೊಳ್ಳಬೇಕು, ಎಲ್ಲರೂ ಒಪ್ಪಿಕೊಳ್ಳಬೇಕು. ಅದಕ್ಕೋಸ್ಕರ ಇಂತಹ ಸಂದರ್ಭಗಳು, ಘಟನೆಗಳು ಏನು ಬರುತ್ತವೆ ಅದನ್ನು ಪ್ರಸ್ತಾಪ ಮಾಡುವುದಕ್ಕೆ ವಿರೋಧ ಪಕ್ಷದವರಿಗೆ ಅವಕಾಶ ಕೊಡತಕ್ಕಂಥಾದ್ದು ಸೂಕ್ತ. ನಾನು ಬಹಳ ಹೊತ್ತಿನಿಂದ ಇಲ್ಲಿ ಕುಳಿತುಕೊಂಡು ನೋಡುತ್ತಿದ್ದೇನೆ. ನಾನು ಇದನ್ನು ಒಳ್ಳೆಯ ಸಭೆ ಎಂದು ಕರೆಯುವುದಿಲ್ಲ. ಇದಕ್ಕೆ ಕಾರಣರಾರು ಎಂಬುದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಯಾರ ಕಡೆಯವರು, ಈ ರೀತಿ ಮಾಡಿದರೂ ಅದು ತಪ್ಪೇ. ಅದಕ್ಕೋಸ್ಕರ ದಯವಿಟ್ಟು, ಈ ಸಭೆಯ ನಾಯಕರು ಏನಿದ್ದಾರೆ ಅವರು ಆ ಕಡೆಯವರಿಗೆ ಸಮಾಧಾನ ಮಾಡಬೇಕು. ನಮ್ಮ ನಾಯಕರು ಇದ್ದಾರೆ ಅವರು ನಮ್ಮನ್ನು ಸಮಾಧಾನ ಮಾಡಲಿ, ಈ ಸಭೆಯನ್ನು ಸ್ವಲ್ಪ ಗಂಭೀರವಾಗಿ ಘನತೆಯಿಂದ ಗೌರವದಿಂದ ನಡೆಸಿಕೊಂಡು ಹೋಗುವುದಕ್ಕೆ ತಾವು ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತು ಏನೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದು ನಮ್ಮ ಕಡೆಯವರು ಇರಬಹುದು, ಆಕಡೆಯವರು ಇರಬಹುದು ವಿಷಯದ ವಿಮರ್ಶೆ ಮಾಡಿದ್ದಾರೆ. ಇದು ವಾದಮಾಡತಕ್ಕಂಥ ವಿಷಯವೆಂದು ಅನೇಕ ಮಾನ್ಯ ಸದಸ್ಯರು ಹೇಳಿದರು ಕೆಲವರು ವಾದ ಮಾಡತಕ್ಕ ವಿಷಯವಲ್ಲವೆಂದು ಹೇಳಿ ಪಾರ್ಲಿಮೆಂಟಿನಲ್ಲಿ ನಡೆದಿರತಕ್ಕಂಥ ವಿಷಯಗಳನ್ನು. ನಮ್ಮ ದೇಶದ ನಾನಾ ರಾಜ್ಯಗಳ ಅಸೆಂಬ್ಲಿಗಳಲ್ಲಿ ನಡೆದಿರತಕ್ಕಂಥ ಅನೇಕ ವಿಷಯಗಳನ್ನು ಎರಡೂ ಕಡೆಯವರು ಪ್ರಸ್ತಾಪ ಮಾಡಿದ್ದಾರೆ. ಇದರ ಆಧಾರದ ಮೇಲೆ ತೀರ್ಮಾನ ಮಾಡತಕ್ಕಂಥ ವಿಷಯವಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಬಹಳ ದಿವಸಗಳಿಂದ ಬಲ್ಲೆ. ನಾನು ವಿಧಾನ ಸಭೆಯನ್ನು ಪ್ರವೇಶ ಮಾಡುವುದಕ್ಕಿಂತ ಮುಂಚಿತವಾಗಿ ಅವರನ್ನು ಶಾಸಕರಾಗಿ, ಮಂತ್ರಿಗಳಾಗಿ ಮತ್ತು ವಿರೋಧಪಕ್ಷದ ನಾಯಕರಾಗಿ ಮತ್ತು ಇವತ್ತು ಇಂಡಿಯಾ ದೇಶದಲ್ಲಿ ಒಳ್ಳೆಯ ಹೆಸರು ಪಡೆದಿರತಕ್ಕಂಥವರು ಎಂಬುದನ್ನು ನೋಡಿದ್ದೇನೆ ಕೇಳಿದ್ದೇನೆ. ಸಂತೋಷ ಆದರೆ ಅವರು ಇಲ್ಲಿ ಇವತ್ತು ನಿಂತುಕೊಂಡು ಮಾತನಾಡತಕ್ಕಂಥ ಸಂದರ್ಭದಲ್ಲಿ ಸಂಪ್ರದಾಯಗಳನ್ನು ಉಳಿಸಿ ಎಂದು ಹೇಳಿದರು, ಅದನ್ನು ಅವರೇ ಪರಿಹಾರ ಮಾಡಬೇಕು. ದಯಮಾಡಿ ತಾವೆಲ್ಲರೂ ಕೂಡ ಸಂಪ್ರದಾಯ ಪಾಲನೆ ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಇವತ್ತು ಅವರು ತಮ್ಮ ಕಿರಿಕುಳದಲ್ಲಿ, ತಮ್ಮ ಹಿಂಸೆಯಲ್ಲಿ ತುಂಬಾ ಬೇಜರಾಗಿದ್ದಾರೆಂದು ತಿಳಿದುಕೊಂಡವನಿಗೆ ಗೊತ್ತು. ನಿಮ್ಮ ಹಿಂಸೆಯಲ್ಲಿ, ನಿಮ್ಮ ಕಾಟದಿಂದ ತಪ್ಪಿಸಿಕೊಳ್ಳಲು ಅವರು ತುಂಬಾ ನೊಂದುಕೊಂಡಿದ್ದಾರೆ, ಪಾಪ. ಅದು ನನಗೆ ಮಾತ್ರ ಗೊತ್ತು. ನಿಮಗ್ಯಾರಿಗೂ ಗೊತ್ತಿಲ್ಲ. ನಿಮ್ಮಲ್ಲಿ ಕೆಲವರು ಹೊಸ ಚುನಾವಣೆಗೆ ಹೋಗಲು ತಯಾರಿಲ್ಲ. ನಾನು ಪತ್ರಿಕೆಗಳಲ್ಲಿ ಓದಿದ್ದೇನೆ ನಿಷ್ಠಾವಂತ ಬಣದವರಲ್ಲಿ ಕೆಲವರು ಮುಖ್ಯಮಂತ್ರಿಗಳ ಹತ್ತಿರ ಹೋಗಿ ದಯಮಾಡಿ ಅಸೆಂಬ್ಲಿಯನ್ನು ವಿಸರ್ಜನೆ ಮಾಡಬೇಡಿ. ನೀವೇನಾದರೂ ಅಸೆಂಬ್ಲಿಯನ್ನು ವಿಸರ್ಜನೆ ಮಾಡಿದರೆ ನಾವು ಕಾಂಗ್ರೆಸ್ ಪಕ್ಷಕ್ಕೆ ಹೋಗಿ ಸೇರಿಕೊಳ್ಳುತ್ತೇವೆಂದು ಹೇಳಿದ್ದಾರೆ. ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ನಿಮ್ಮವರು ಹೆದರಿಕೊಂಡು...

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಪಕ್ಷದವರೇ ಹೆದರಿಕೊಂಡು ಅಸೆಂಬ್ಲಿಯನ್ನು ವಿಸರ್ಜನೆ ಮಾಡಬೇಡಿ ಎಂದು ಒತ್ತಾಯ ಮಾಡುತ್ತಿದ್ದಾರೆ. ಅಸೆಂಬ್ಲಿಯನ್ನು ವಿಸರ್ಜನೆ ಮಾಡುತ್ತಾರೆಂದು ಯಾರು ಹೇಳಿದ್ದಾರೆಂದು ನನಗೆ ಗೊತ್ತು...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ರೆಡಿಯಾಗಿದ್ದೇವೆ. ನಿಮಗೆ ತಾಕತ್ತು ಇದ್ದರೆ ಅಸೆಂಬ್ಲಿಯನ್ನು ವಿಸರ್ಜನೆ ಮಾಡಿ...

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ನಮ್ಮ ಪಕ್ಷದವರು ಬರೆದುಕೊಡುತ್ತೇವೆ. ನಿಮ್ಮ ಪಕ್ಷದವರು ಬರೆದು ಕೊಡಲಿ ನೋಡೋಣ.

(ಗೊಂದಲ)

ಶ್ರೀ ಜಿ. ಮಾದೇಗೌಡ.—ಲಾರಿಯಲ್ಲಿ ಮೆಂಬರ್‌ಗಳನ್ನು ತುಂಬಿಕೊಂಡು ರಾಜ್ಯಪಾಲರ ಮನೆಯಲ್ಲಿರಿಸಿದ್ದು ನನಗೆ ಗೊತ್ತಿಲ್ಲವೇ ? ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೇ. ಮಾನ್ಯ ಮುಖ್ಯಮಂತ್ರಿಗಳು ತುಂಬಾ ಚತುರರು ನನಗೆ ಗೊತ್ತು. ಅವರಿಗೆ ಯಾವ ಸಂದರ್ಭದಲ್ಲಿ ಏನು ತೀರ್ಮಾನ ತೆಗೆದುಕೊಳ್ಳಬೇಕೆನ್ನುವುದು ಗೊತ್ತಿದೆ. ವಿಧಾನ ಸಭೆಯನ್ನು ಯಾವಾಗ ವಿಸರ್ಜನೆ ಮಾಡಬೇಕೆನ್ನುವುದು ಗೊತ್ತಿದೆ. ಇನ್ನು ಸ್ವಲ್ಪ ದಿವಸ ತಾಳಿ. ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕಾದ ಹೇಳಿಕೆಯನ್ನು ಬೊಮ್ಮಾಯಿ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ಹೇಳಿಕೆ ಕೊಡಲಿಲ್ಲ ಅದೊಂದು Planted story ಅವರು ಹೇಳಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಹೇಳಬೇಕಾದ್ದನ್ನು ತಾವು...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ದಿಲ್ಲಿಯಿಂದ ಬಂದಿದ್ದು ನಮಗೆ ಗೊತ್ತಿದೆ

SRI K. H SRINIVAS.—The Chief Minister who enjoys majority should say and no other Minister is competent to deny it. Your are over-stepping your limits.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಹೇಳಿಲ್ಲವಲ್ಲ. ಹೇಳಿದ್ದಿದ್ದರೆ ಅದು ಬೇರೆ:

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ಯಾವ ಪತ್ರಿಕೆಯಲ್ಲಿ ಬಂದಿದೆ ? ಅವರು ಹೇಳಬೇಕಾದ್ದನ್ನು ತಾವು ಹೇಳತಕ್ಕಂಥ ಅಧಿಕಾರ ತಮಗಿಲ್ಲದೆ ? It is exclusively the prerogative of the Chief Minister not the Cabinet Minister.

SRI M. VEERAPPA MOILY.—He is entitled to send peelers and get the reaction. ಇಚ್ಛೆ ಇದ್ದರೆ ನಾವೇತಕ್ಕೆ ಅಡ್ಡ ಬಗುತ್ತೇವೆ.

ಶ್ರೀ ಜಿ. ಮಾದೇಗೌಡ.—ಅವರೇನು ಅಮೆರಿಕಾಕ್ಕೆ ಹೋಗಿರಲಿಲ್ಲ, ಇಂಗ್ಲೇಂಡ್‌ಗೆ ಹೋಗಿರಲಿಲ್ಲ ಅವರ ಅಧಿಕಾರವನ್ನು ನೀವೇಕೆ ಕಿತ್ತುಕೊಳ್ಳುತ್ತೀರಿ ? (ಶ್ರೀ ಎಸ್. ಆರ್. ಬೊಮ್ಮಾಯಿಯವರನ್ನು ಉದ್ದೇಶಿಸಿ) ಅವರು ಬಹಳ ಜಾಣರು ಎಂದು ನಾನು ಹೇಳಿದ್ದೇನಲ್ಲಾ (ಮುಖ್ಯ ಮಂತ್ರಿಯವರನ್ನು ಉದ್ದೇಶಿಸಿ) ನಾನು ಬುದ್ಧಿವಂತ ಎಂದು ಹೇಳಿಕೊಳ್ಳುತ್ತಿಲ್ಲ. ನಾನು ಬಹಳ ಸಣ್ಣವನು. ಆದರೆ ಒಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಜಾಪ್ರಭುತ್ವದ ಮೌಲ್ಯಗಳು ಏನು ಇವೆಯೋ ಅವುಗಳು ಇವತ್ತು ನಮ್ಮ ರಾಜ್ಯದಲ್ಲಿ ಇಲ್ಲವೆಂದು ಮುಖ್ಯಮಂತ್ರಿಗಳಿಗೆ ಖಚಿತವಾಗಿ ಗೊತ್ತಿದೆ. ಅದಕ್ಕೋಸ್ಕರ ಅವರು ನೋವನ್ನು ಅನುಭವಿಸುತ್ತಿದ್ದಾರೆ. ಆಗಲೇ ಇದರ ಬಗ್ಗೆ ನಮ್ಮ ಲಕ್ಷ್ಮೀಸಾಗರ್‌ರವರು ಬಹಳ ಚೆನ್ನಾಗಿ ಆರ್ಗ್ಯುಮೆಂಟನ್ನು ಮಾಡಿದ್ದಾರೆ. ಬಹುಶಃ ಪಾಯಿಂಟ್ ಆಫ್ ಆರ್ಡರ್ ಮೇಲೆ ಒಂದು ಗಂಟೆಗಿಂತ ಹೆಚ್ಚು ವಾದ ಮಾಡಿರುವುದು ಇವರು ಒಬ್ಬರೇ ಎಂದು ಕಾಣುತ್ತದೆ. ಪಾಯಿಂಟ್ ಆಫ್ ಆರ್ಡರ್ ಮೇಲೆ ಅವರು ಒಂದು ಗಂಟೆಗಿಂತ ಹೆಚ್ಚು ಮಾತನಾಡಿದ್ದಾರೆ. ಸುಪ್ರೀಮ್ ಕೋರ್ಟಿನಲ್ಲಿ ದೊಡ್ಡ ಲಾಯರ್‌ಗಳು ಒಂದು ಗಂಟೆ ವಾದ ಮಾಡುವುದಕ್ಕೆ ೫ ಸಾವಿರ ದಿಂದ ೨೫ ಸಾವಿರ ರೂಪಾಯಿಗಳವರೆಗೆ ತೆಗೆದುಕೊಳ್ಳುತ್ತಾರಂತೆ. ಅದರ ಬಗ್ಗೆ ನನಗೆ ಗೊತ್ತಿಲ್ಲ. ಅವರು, ಇವರು, ಹೇಳಿದ್ದನ್ನು ಕೇಳಿದ್ದೇನೆ. ನಾನು ಇದನ್ನು ಹೇಳತಕ್ಕಂತಾದ್ದು ಏಕೆ ಎಂದರೆ, ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಏನು ೩ ಅಂಗಗಳು ಇವೆಯೋ ಅವು ಇತ್ತೀಚೆಗೆ ಅಂದರೆ ಜನತಾಪಕ್ಷ ಅಧಿಕಾರಕ್ಕೆ ಬಂದ ಮೇಲೆ ಇವುಗಳ ಪ್ರತಿಷ್ಠೆಗಳು, ಸ್ಥಾನಮಾನಗಳು ಕೆಳಕ್ಕೆ ಹೋಗುತ್ತಿವೆ ಎನ್ನುವುದು ನಿರ್ವಿವಾದದ ಮಾತು.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡಿ.

ಶ್ರೀ ಜಿ. ಮಾದೇಗೌಡ.—ನಾನು ಅದರ ಮೇಲೆಯೇ ಮಾತನಾಡುತ್ತಿರುವುದು.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದೇ ಪಾಯಿಂಟ್ ಆಫ್ ಆರ್ಡರ್ ಮೇಲೆ ಅರ್ಧ ದಿನ ಮಾತನಾಡಿರುವುದೂ ಉಂಟು.

ಶ್ರೀ ಜಿ. ಮಾದೇಗೌಡ.—ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಯಾರಾದರೂ ಒಬ್ಬರು ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುವುದಕ್ಕೆ ಅವಕಾಶ ಕೊಡುವ ಅಥವಾ ಬಿಡುವ ಅಧಿಕಾರ ನಿಮಗೆ ಮಾತ್ರ ಉಂಟೇ ವಿನಃ ನನ್ನನ್ನು ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ನಾನು ಮಾತನಾಡುತ್ತಿರುವಾಗ ಅವರು ಏಕೆ ಎದ್ದು ನಿಂತು ಗಲಾಟೆ ಮಾಡುವುದು ? ಅವರು ನನ್ನನ್ನು ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಅವರು ಯಾರು ?

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಬಗ್ಗೆ ತಾವು ಹೇಳಿ,

ಶ್ರೀ ಜಿ. ಮಾದೇಗೌಡ.—ಅದನ್ನೇ ನಾನು ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವದ ೩ ಅಂಗಗಳು ಏನು ಇವೆ ಅವುಗಳು ಇವತ್ತಿನ ದಿವಸಗಳಲ್ಲಿ ಕೆಳಕ್ಕೆ ಹೋಗುತ್ತಿವೆ. ಇದರ ಜೊತೆಗೆ ಪತ್ರಿಕಾ ಸ್ವಾತಂತ್ರ್ಯಕ್ಕೂ ಕಡಿವಾಣ ಹಾಕಬೇಕೆನ್ನುವ ಮಟ್ಟಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾರೆ. ಆ ಮೇಲೆ ಇನ್ನೊಂದು ಹೇಳಬೇಕೆಂದರೆ, ಬಾಟ್ಲಿಂಗ್ ಕೇಸ್‌ನಲ್ಲಿ ಮುಖ್ಯ ಮಂತ್ರಿಗಳ ವಿರುದ್ಧವಾಗಿ ಹೈಕೋರ್ಟಿನ ತೀರ್ಪು ಬಂದಾಗ ರಾಜೀನಾಮೆಯನ್ನು ಕೊಟ್ಟಿದ್ದರು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಇದು ಹೇಳತಕ್ಕಂತಾ ವಿಷಯ ಅಲ್ಲ.

ಶ್ರೀ ಜಿ. ಮಾದೇಗೌಡ.—ಆಯಿತು. ಮತ್ತೆ ಈ ಸದನದ ಮಾನ್ಯ ಸದಸ್ಯರುಗಳು ಬ್ರಿಗೇಡ್ ರಸ್ತೆಯಲ್ಲಿ ಕಾಲ ಕಳೆಯುತ್ತಿದ್ದಾರೆ. ಜನರ ಕಷ್ಟ ಸುಖಗಳ ಕಡೆ ನೋಡುತ್ತಿಲ್ಲ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಹೋದಸಾರಿ ಚುನಾವಣೆಯಲ್ಲಿ ಜನತಾ ಪಕ್ಷದವರು ಮಹಾತ್ಮ ಗಾಂಧೀಜಿಯವರ ಫೋಟೋವನ್ನು ಹಾಕಿಕೊಂಡು ಗಾಂಧೀಜೀಯವರ ತತ್ವವನ್ನು ನಾವು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿಕೊಂಡು ಅಧಿಕಾರಕ್ಕೆ ಬಂದರು. ಮಹಾತ್ಮ ಗಾಂಧೀಜಿಯವರ ತತ್ವವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿ ಗೆದ್ದು ಬಂದ ಶಾಸಕರು ಬ್ರಿಗೇಡ್ ರಸ್ತೆಯಲ್ಲಿ ಕುಡಿಯಲಿಕ್ಕೆ, ಇಸ್ಪೀಟ್ ಆಟ ಆಡುವುದಕ್ಕೆ ಸಮಯವನ್ನು ಕಳೆಯುತ್ತಿದ್ದರೆ ಅಂಥ ಮಾನ್ಯ ಸದಸ್ಯರುಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಮುಖ್ಯ ಮಂತ್ರಿಯವರಿಗೆ ಅಧಿಕಾರ ಇದೆ. ಅದಕ್ಕೆ ನಾನು ಮುಖ್ಯ ಮಂತ್ರಿಯವರನ್ನು ನೇರವಾಗಿ ಕೇಳುತ್ತೇನೆ ಇದು ಸದನದ ಗೌರವದ ಪ್ರಶ್ನೆ. ಅವರ ಪಕ್ಷದ ಸದಸ್ಯರುಗಳನ್ನು ಉದ್ದೇಶಿಸಿ ಆ ಮಾತು ಹೇಳಿದ್ದರೆ ಅದು ಹಕ್ಕುಚ್ಯುತಿಯಾಗುತ್ತದೆ.

ನಾವು ಈ ಸದನದ ಒಂದು ಗೌರವವನ್ನು ಮತ್ತು ಸದಸ್ಯರಿಗಿರುವ ಹಕ್ಕನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಈಗ ನಮ್ಮ ಮುಂದಿರುವುದು ಸದಸ್ಯರ ಹಕ್ಕಿನ ಚ್ಯುತಿಯ ವಿಷಯವಾಗಿದೆ. ಮಾನ್ಯ ಲಕ್ಷ್ಮೀಸಾಗರ್‌ರವರ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಯಾವುದೋ ಒಂದು ವರ್ಗಕ್ಕೆ ಸಂಬಂಧಪಟ್ಟಂಥ ಪಕ್ಷದ ಜನರ ಬಗ್ಗೆ ಹೇಳಿದ್ದಾರೆ. ಅವರ ಪಕ್ಷದಲ್ಲಿ ಏನಾದರೂ ಅಶಿಸ್ತು ಕಂಡು ಬಂದಲ್ಲಿ ಸಂಬಂಧಪಟ್ಟವರ ಮೇಲೆ ಅವರ ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳಬಹುದು ಅಂತಹವರನ್ನು ಪಕ್ಷದಿಂದ ವಜಾ ಮಾಡಬಹುದು. ಅದನ್ನು ನಾವು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಇಲ್ಲಿ ಅವರು ಯಾವ ವಿಧವಾದಂಥ ಕ್ರಮವನ್ನು ಕೂಡ ತೆಗೆದುಕೊಂಡಿಲ್ಲ. ಮಾನ್ಯ ದೇವೇಗೌಡರು ಹೇಳುತ್ತಾರೆ, ಪಕ್ಷವನ್ನು ನಾನು ಕಟ್ಟಿದವನು. ಪಕ್ಷವನ್ನು ನಾನು ಬೆಳಸಿದವನು ಎಂದೆಲ್ಲಾ ಹೇಳುತ್ತಿದ್ದಾರೆ. ಇವರಲ್ಲಿಯೇ ಭಿನ್ನಮತ ಹೆಚ್ಚಿಗೆ ಆಗಿದೆ. ಇವರಿಗೆ ಮುಖ್ಯಮಂತ್ರಿಗಳಾಗಿ ಮುಂದುವರೆಯುವುದಕ್ಕೆ ಹಕ್ಕು ಇಲ್ಲವೆಂದರೂ ಕೂಡ ಮುಂದುವರಿಯುವುದಕ್ಕೆ ನನಗೆ ಹಕ್ಕು ಇದೆಯೆಂದು ಹೇಳುತ್ತಿದ್ದಾರೆ. ಪರಿಷತ್ತಿನ ಚುನಾವಣೆಯಲ್ಲಿ ೫೦ ಜನ ಇವರ ಪಕ್ಷದವರು ಬೇರೆ ಹೋದಮೇಲೆ ಇವರಿಗೆ ಮೆಜಾರಿಟಿ ಎಲ್ಲಿಂದ ಬಂತು? ಇವರಿಗೆ ಯಾವ ಆಧಾರ ಈಗ ಇದೆ? ಈ ಬಗ್ಗೆ ಮುಖ್ಯ ಮಂತ್ರಿಗಳು ನ್ಯಾಯವಾಗಿ ಯೋಚನೆಯನ್ನು ಈ ಕುರಿತು ಮಾಡಿದ್ದರೆ ಅವರು ಈಗ ಅಸೆಂಬ್ಲಿಯನ್ನು

ವಿಸರ್ಜಿಸಬೇಕು. ಮತ್ತೆ ಜನರ ಮುಂದೆ ಬಂದು ನಿಲ್ಲಬೇಕು ಇವರಿಗೆ ನಿಜ ಎನ್ನುವುದು ಗೊತ್ತಿಲ್ಲ ಎಂದು ಕಾಣುತ್ತದೆ. ಯಾಕೆಂದರೆ ಯಾವಾಗಲೂ ವಿೂನಿನ ಜೊತೆಯಲ್ಲಿದ್ದವನಿಗೆ ಹೂವಿನ ವಾಸನೆಯು ಹಿಡಿಸುವುದಿಲ್ಲ. ಹಾಗೆಯೇ ಯಾವಾಗಲೂ ಇದೇ ರೀತಿಯಲ್ಲಿ ನಡೆದು ಕೊಂಡುಬಂದ ಇವರಿಗೆ ವಾಸ್ತವತೆಯು ಸರಿಯಾಗಿ ಕಾಣುವುದಿಲ್ಲ. ಇವರಿಗೆ ಸತ್ಯದ ವಿಷಯವು ಹಿಡಿಸುವುದಿಲ್ಲ ಇತ್ತೀಚೆಗೆ ಅವರ ಪಕ್ಷದಲ್ಲಿ ಭಿನ್ನಾಭಿಪ್ರಾಯ ಬಂದ ಮೇಲೆ, ಅವರಲ್ಲಿಯೇ ಒಗ್ಗಟ್ಟು ಇಲ್ಲದಿದ್ದ ಮೇಲೆ ಮುಖ್ಯ ಮಂತ್ರಿಗಳು ಅಸಹಾಯಕರಾಗಿದ್ದಾರೆ. ಸಾಮಾನ್ಯ ಜನರಲ್ಲಿ ಈ ಶಾಸಕರು ಅಂದರೆ ಬ್ರಿಗೇಡ್‌ರೋಡ್ ಬೀದಿಯಲ್ಲಿ ತಿರುಗಾಡತಕ್ಕಂಥವರು ಎಂಬ ಭಾವನೆ ಬರುವಂತೆ ಕೆಲವು ಮಾತುಗಳನ್ನು ಆಡಿದ ಮುಖ್ಯ ಮಂತ್ರಿಯವರು ಹೀಗೆ ಅನ್ನುತ್ತಾರೆಂದು ನಾನು ಭಾವಿಸಿರಲಿಲ್ಲ. ಯಾಕೆಂದರೆ ಅವರು ಬಹಳ ಅರಿತುನುರಿತವರಾಗಿದ್ದಾರೆ ಅಂತಹವರಬಾಯಲ್ಲಿ ಇಂತಹ ಮಾತುಗಳು ಬರುತ್ತವೆ ಎಂದರೆ ಜನರು ಆಶ್ಚರ್ಯಪಡುವ ಸಂದರ್ಭವೇ ಹೆಚ್ಚು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಹೇಳುತ್ತಾರೆ ಎನ್ನುವುದನ್ನು ನಾವು ನಿರೀಕ್ಷಿಸುತ್ತೇವೆ. ನಿಜವಾಗಿಯೂ ಕೂಡ ನನ್ನ ಅಭಿಪ್ರಾಯದಲ್ಲಿ ನಿಮ್ಮ ಪಕ್ಷದಲ್ಲಿ ಶಿಸ್ತನ್ನು ಕಾಪಾಡಿ. ನಿಮ್ಮ ಘನತೆಯನ್ನು ಭಾರತದೇಶದ ಮಟ್ಟದಲ್ಲಿ ಉನ್ನತವಾಗಿ ಕಾಪಾಡಿಕೊಳ್ಳಲು, ನಿಮ್ಮ ಪಕ್ಷದಲ್ಲಿನ ಶಿಸ್ತನ್ನು ಒಡೆದು ಹಾಕಲು ಕಾರಣರಾದವರನ್ನು ಸಸ್ಪೆಂಡ್ ಮಾಡಬೇಕು, ಇಲ್ಲದಿದ್ದರೆ ಅಸೆಂಬ್ಲಿಯನ್ನು ವಿಸರ್ಜನೆ ಮಾಡಿ ಜನರ ಮುಂದೆ ಹೋಗಬೇಕು. ಆಗಮಾತ್ರ ನಿಮ್ಮ ಈ ಒಂದು ಕೀರ್ತಿಯು ಉಳಿಯುತ್ತದೆ, ಎಂದು ಹೇಳಬಯಸುತ್ತೇನೆ.

ಶ್ರೀ ಶಿವಾನಂದ ಕೌಜಲಗಿ.—ಅಧ್ಯಕ್ಷರೆ, ನನ್ನದು ಒಂದು ಕ್ರಿಯಾಲೋಪ ಇದೆ...

ಶ್ರೀ ಜಿ. ಮಾದೇಗೌಡ.—ನೀವು ಏನು ಹೆಸರನ್ನು ಇವೊತ್ತು ಗಳಿಸಿಕೊಂಡಿದ್ದೀರಿ ಅದನ್ನು ಮುಂದುವರಿಸಿಕೊಂಡು ಹೋಗಲು ಈ ಕ್ರಮಗಳನ್ನು ತಾವು ಅನುಸರಿಸಲೇಬೇಕಾಗುತ್ತದೆ. ಈ ದಿಶೆಯಲ್ಲಿ ನೀವು ಸದನದ ಗೌರವವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ತಾವುಗಳು ಶಾಸಕರ ಬಗ್ಗೆ ಆ ರೀತಿಯ ಮಾತುಗಳನ್ನು ಆಡಿ ಸದನದ ಸದಸ್ಯರ ಹಕ್ಕುಚ್ಯುತಿಗೆ ಕಾರಣರಾಗಿದ್ದೀರಿ. ಆದುದರಿಂದ ಮಾನ್ಯ ಅಧ್ಯಕ್ಷರೆ. ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆ,—ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರವು ಎಲ್ಲೋ ಪ್ರಾರಂಭವಾಗಿ ಎಲ್ಲೋ ಮುಟ್ಟಿದೆ. ಅದಕ್ಕೆ ನನ್ನ ಸ್ನೇಹಿತರು ಮತ್ತು ಈ ಸಭೆಯ ಹಿರಿಯ ಮಾನ್ಯ ಸದಸ್ಯರೂ ಆದ ಮಾದೇಗೌಡರು ಚೇರೊಂದು ತಿರುವನ್ನು ಕೊಟ್ಟರು. ನಾನು ಈ ವಿಚಾರದಲ್ಲಿ ಮೊಟ್ಟಮೊದಲನೆದಾಗಿ ಒಂದು ಮಾತನ್ನು ಸ್ಪಷ್ಟೀಕರಣ ಮಾಡುವುದಕ್ಕೆ ಬಯಸುತ್ತೇನೆ. ನಾನು ಯಾವ ಅರ್ಥದಲ್ಲಿ ಈ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೋ ಆ ಅರ್ಥಕ್ಕೂ ಈ ಮನೆಯಲ್ಲಿ ಈಗ ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಅರ್ಥಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಬ್ರಿಗೇಡ್‌ರೋಡ್‌ಗೆ ಹೋಗತಕ್ಕಂಥ ವಿಚಾರವು ಯಾರಿಗೇ ಆಗಲೀ ಅಥವಾ ಯಾರ ಗೌರವಕ್ಕೇ ಆಗಲಿ, ಯಾವುದೇ ರೀತಿಯಲ್ಲಿಯೂ ಚ್ಯುತಿ ತರತಕ್ಕಂಥ ವಿಚಾರವಲ್ಲ. ನಾನು ಆ ಪದವನ್ನು ಏತಕ್ಕೆ ಬಳಸಿದೆ ಅಂದರೆ, ಆದರ ಅರ್ಥ ಮತ್ತು ಹಿನ್ನಲೆಯು—ಇಷ್ಟೇ ರಾಜ್ಯದ ಜನರು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಆದ್ದರಿಂದ ನಮ್ಮ ಕಾರ್ಯಕ್ಷೇತ್ರ ಎಲ್ಲಿದೆಯೋ ಅಲ್ಲಿ ಹೆಚ್ಚು ಗಮನವನ್ನು ಕೊಡಬೇಕೆಂಬ ಅರ್ಥದಲ್ಲಿ ಹೇಳಿದ್ದೇನೇ ಹೊರತು ಯಾರ ಗೌರವಕ್ಕೂ ಕುಂದು ಮಾಡಬೇಕೆಂದು ನಾನು ಹೇಳಲಿಲ್ಲ. ಬ್ರಿಗೇಡ್ ರೋಡಿಗೂ ಬಾಂಬೆಯಲ್ಲಿರುವ ಫೋರ್ಸ್ ರಸ್ತೆಗೂ ವ್ಯತ್ಯಾಸ ಇದೆ. ಬ್ರಿಗೇಡ್ ರಸ್ತೆಯನ್ನು ಯಾರೂ ಕೆಟ್ಟ ಅರ್ಥದಲ್ಲಿ ಉಪಯೋಗಿಸುವುದಿಲ್ಲ. ಆದರೆ ಅಲ್ಲಿಗೆ ಚಾರಿತ್ರ್ಯ ಇಲ್ಲದಿರುವವರು ಹೋಗುತ್ತಾರೆಂದು ಅರ್ಥವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದೇವೇಗೌಡರು ಕುಣಿಗಲ್‌ನಲ್ಲಿ ಇವರೇ ಬ್ರಿಗೇಡ್‌ರೋಡ್ ಶಾಸಕರು ಎಂದು ತೋರಿಸಿರುವುದು ಏನು ತೋರಿಸುತ್ತದೆ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ನೀವ್ಯಾಕೆ ತಲೆಕೆಡಿಸಿಕೊಳ್ಳುತ್ತೀರಿ. ದೇವೇಗೌಡರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೇವಲ ಇದು ನಿಮ್ಮಿಬ್ಬರಿಗೆ ಸಂಬಂಧಪಟ್ಟದ್ದಲ್ಲ ನಿಮ್ಮ ಮಂತ್ರಿಗಳು ಲಕ್ಷಾಂತರ ರೂಪಾಯಿಗಳನ್ನು ಒಂದೇ ರಾತ್ರಿಯಲ್ಲಿ ಬೆಟ್ ಕಟ್ಟಿ ಕಳೆದುಕೊಳ್ಳುತ್ತಾರೆ ಎಂದು ಅವರು ಹೇಳುವುದು...

ಶ್ರೀ ರಾಮಕೃಷ್ಣ ಹೆಗಡೆ.—ಆ ವಿಚಾರವನ್ನು ತರುವುದಾದರೆ ನಾನೂ ಉತ್ತರ ಕೊಡಬೇಕಾಗುತ್ತದೆ. ಇವರ ಪಕ್ಷದಲ್ಲಿ ಯಾರು ಯಾರ ಬಗ್ಗೆ ಏನೇನು ಅಭಿಪ್ರಾಯ ಕೊಡುತ್ತದೆ. ಎನ್ನುವುದರ ಬಗ್ಗೆ ಮಾತನಾಡಲೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. ನೀವು ಈ ಸದನದ ಮುಖಂಡರಿದ್ದೀರಿ. ನಾವೇನಾದರೂ ತಪ್ಪು ಮಾತನಾಡಿದರೆ ನಮ್ಮ ಮೇಲೆ ಡಿಸಿಪ್ಲೀನ್ ರಿಸ್ಟ್ರಿಕ್ಷನ್ ತೆಗೆದುಕೊಳ್ಳುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಎರಡು ಪಾತ್ರಗಳನ್ನು ವಹಿಸಬೇಕಾಗಿದೆ. ಒಂದು ಈ ಮನೆಯ ನಾಯಕ ಮತ್ತು ಮುಖ್ಯಮಂತ್ರಿಯಾಗಿ, ಮತ್ತೊಂದು ಪಕ್ಷದ ನಾಯಕನಾಗಿ. ಈ ಪಕ್ಷದ ನಾಯಕನಾಗಿ ಹೇಗೆ ಕಾರ್ಯ ನಿರ್ವಹಿಸಬೇಕೆಂದು ನನಗೆ ಗೊತ್ತುಂಟು ಅದನ್ನು ಕುರಿತು ನೀವು ವ್ಯಾಕುಲಗೊಳ್ಳಬೇಕಾದ ಅಗತ್ಯವಲ್ಲ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ತಮ್ಮ ಪಾಯಿಂಟ್ ಆಫ್ ಆರ್ಡರ್ ವಿಚಾರದಲ್ಲಿ ಸಾಕಷ್ಟು ಬೆಳಕನ್ನು ಹಾಕಿದ್ದಾರೆ. ಅವರ ವಿದ್ಯಾ ಪರಿಣತಿಗಾಗಿ ಈ ಮನೆಯ ಎಲ್ಲ ಸದಸ್ಯರೂ ಅವರಿಗಾಗಿ ಋಣಿಗಳಾಗಿರಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಯಾವ ಜನ್ಮದ ಪಾಪವೋ ಈ ಮನೆಯಲ್ಲಿ ಅವರ ಋಣದಲ್ಲಿ ನಾವು ಈಗ ಬಿದ್ದಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.— ಪ್ರೊಫೆಸರ್ ಅಷ್ಟು ಹೇಳದಿದ್ದರೆ ಅನೇಕರ ತಲೆಯಲ್ಲಿ ಪ್ರಿವಿಲೇಜ್ ಬಗ್ಗೆ ಏನು ತಪ್ಪು ತಿಳಿವಳಿಕೆ ಇರುತ್ತಿತ್ತೋ ಅದು ಹೋಗುತ್ತಿರಲಿಲ್ಲ. ಮತ್ತು ಮೊಯಿಲಿಯವರು ಕಣ್ಣಿದ್ದೂ ಕುರುಡರ ಹಾಗೆ ಈ ಒಂದು ಉಪಮಾನ ಯಾರಿಗಾದರೂ ಅನ್ವಯಿಸುವುದಾದರೆ ಅದು ಮೊಯ್ಲಿಯವರಿಗೆ ಅನ್ವಯಿಸುತ್ತದೆ. ಅವರು ಕಾಣದ್ದನ್ನು ಕಂಡಂತೆಯೂ ಕಂಡದ್ದನ್ನು ಕಾಣದಂತೆಯೂ ಆಡುತ್ತಾರೆ. ಅಂತಹ ಚಾತುರ್ಯ ಅವರಿಗಿದೆ ಏಕೆಂದರೆ ಅವರು ಸ್ವಲ್ಪಮಟ್ಟಿಗೆ ಕವಿಯೂ ಹೌದು. ನಾನಂತೂ ಯಾರ ಘನತೆ ಗೌರವಕ್ಕೂ ಕುಂದು ತರುವ ಮಾತನ್ನು ಆಡಿಲ್ಲ ಆದ್ದರಿಂದ ಈ ವಿಚಾರ ಹಕ್ಕುಬಾಧ್ಯತಾ ಸಮಿತಿಗೆ ಹೋಗುವ ಬಗ್ಗೆ ಚರ್ಚೆ ಆಗಬೇಕಾಗಿಲ್ಲ. ಮಾನ್ಯ ಮಾದೇಗೌಡರು ತಮ್ಮದೇ ಆದ ಅನುಕರಣೀಯ ಧಾಟಿಯಲ್ಲಿ ಇಂದು ಒಂದು ಹಿತೋಪದೇಶವನ್ನು ಕೊಟ್ಟಿದ್ದಾರೆ. ಅದೇನೆಂದರೆ ಇಂದು ನಾನು ಸಂಕಷ್ಟಕ್ಕೆ ಸಿಕ್ಕಿರುವುದಾಗಿಯೂ, ನನ್ನ ಗೌರವವನ್ನು ಉಳಿಸಿಕೊಳ್ಳಬೇಕಾದರೆ ಉಳಿದಿರುವ ಮಾರ್ಗ ಒಂದೇ ಎಂದರೆ ವಿಧಾನಸಭೆಯನ್ನು ವಿಸರ್ಜಿಸಿ ಹೊಸದಾಗಿ ಚುನಾವಣೆ ಮಾಡಿ ಎಂಬುದು. ಈ ಮಾತನ್ನು ಹೇಳಿದ ತಕ್ಷಣ ದಿ ಕ್ಯಾಟ್ ಇಸ್ ಔಟ್ ಆಫ್ ದಿ ಬಾಗ್, ಇದರ ಹಿಂದೆ ಯಾರಿದ್ದಾರೆ ಎಂದು ಗೊತ್ತಾಯಿತು. ೫ ವರ್ಷದಲ್ಲಿ ೫ ಸಲ ಜನರ ಹತ್ತಿರ ಹೋಗಿದ್ದೇವೆ, ಅದಕ್ಕೇನೂ ನಾವು ಹಿಂದು ಮುಂದೆ ನೋಡುವವರಲ್ಲ ಈಗ ಪುನಃ ಜನರ ಮುಂದೆ ಹೋಗುತ್ತಾ ಇದ್ದೇವೆ.

೫–೩೦ ಪಿ. ಎಂ.

ಒಂದೇ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇದರ ಬಗ್ಗೆ ಸಾಕಷ್ಟು ಕಲ್ಪನೆ, ಊಹಾಪೋಹ ನಡೆದಿದೆ. ಇದು ದುರುದ್ದೇಶದಿಂದ ಆಗಿದೆ. ಅದು ಹೇಗೇ ಇರಲೀ. ನಾನು ನಮ್ಮ ಪಕ್ಷದ ಮತ್ತು ನಮ್ಮ ಸರಕಾರದ ನೀತಿಯನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ಸಭೆಯನ್ನು ವಿಸರ್ಜನೆ ಮಾಡತಕ್ಕಂತಹ ಪರಿಸ್ಥಿತಿ ಯಾವಾಗ ಬರುತ್ತದೆಂದರೆ ಈ ಸರಕಾರ ಬಿದ್ದು ಹೋದರೆ ಮಾತ್ರ ಬರುತ್ತದೆ ಅದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡುತ್ತೇನೆ. ಈ ಸರಕಾರ ಹೋದರೆ ಬೇರೆ ಯಾವುದೇ ಸರಕಾರ ಸ್ಥಿರವಾಗಿ ನಿಲ್ಲುವುದು ಸಾಧ್ಯವಿಲ್ಲ. ಕಾಶ್ಮೀರದ ಜಿ. ಎಂ. ಷಾ. ಸರಕಾರ ಏನಾಯಿತು ಎಂದು ಗೊತ್ತುಂಟು. ಆಂಧ್ರದ ಭಾಸ್ಕರರಾವ್ ಸರಕಾರ ಏನಾಯಿತು ಎಂದು ಗೊತ್ತುಂಟು ಕೇಂದ್ರದಲ್ಲಿ ಚರಣಸಿಂಗ್‌ರವರ ಸರಕಾರ ಏನಾಯಿತು ಅದೂ ಗೊತ್ತುಂಟು. ಜನರ ಸ್ಮೃತಿಯಲ್ಲಿ ಈ ವಿಚಾರ ಈ ಘಟನೆಗಳು ಇನ್ನೂ ಅತ್ಯಂತ ಸ್ಪಷ್ಟವಾಗಿ ಇವೆ ಆದ್ದರಿಂದ ಏನೇ ಕುಹಕ, ಯಾವುದೇ ಕುತಂತ್ರವನ್ನು ಮಾಡಲಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಕಡೆ ನೋಡಿ ಹೇಳಲಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಕುತಂತ್ರ ಮಾಡಿದರೆ ಫಲ ಸಿಗುವುದಿಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂಲಿಂಗ್ ಕೊಡಬೇಡಿ. ಅವರು ಹೇಳಿದರು ಈ ಸದಸ್ಯರ ಹಕ್ಕುಚ್ಯುತಿಯಾಗತಕ್ಕಂತಹ ಯಾವುದೇ ಹೇಳಿಕೆಯನ್ನು ಹೇಳಲಿಲ್ಲವೆಂದು. ಇದರ ಬ್ಯಾಕ್‌ಗ್ರೌಂಡ್ ಏನು ಇದೆ ಅದು ಅವರಿಗೂ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಮೇಲೆ ಅವರ ಪಕ್ಷದಲ್ಲಿ ಏನಾದರೂ ಭಾಷಣ ಮಾಡಿ ಅವರಿಗೆ ಹಿತವಚನ ಹೇಳಿದ್ದರೆ ಆ ಪ್ರಶ್ನೆ ಇಲ್ಲಿ ಉದ್ಭವಿಸುತ್ತಿರಲಿಲ್ಲ. ಅವರು ಖುದ್ದಾಗಿ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟು ಕೆಲವು ಶಾಸಕರು ಬ್ರಿಗೇಡ್ ರೋಡಿನಲ್ಲಿ ಅಡ್ಡಾಡುತ್ತಾರೆ, ಅದನ್ನೆ ಅವರ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಾರೆಂದು ಹೇಳಿದ ಮೇಲೆ ಇದು ನಮಗೆ ಅವಮಾನಕಾರಿಯಾದಂಥಾದ್ದು ಎಂದು ತಿಳಿದುಕೊಂಡಿದ್ದು ಮುಖ್ಯ ಮಂತ್ರಿಗಳನ್ನು ಪಕ್ಷದಲ್ಲಿ ಯಾರು ವಿರೋಧಿಸುತ್ತಿದ್ದರು ಅವರೂ ಕೂಡ ಒಂದು ಸ್ಟೇಟ್‌ಮೆಂಟ್ ಅನ್ನು ಕೊಟ್ಟರು ಅವರು ಏನು ಹೇಳಿದರು ಎಂದರೆ ಸರಕಾರದಲ್ಲಿ ಕೂಡ ಕೆಲವು ಮಂತ್ರಿಗಳು ಈಗ ಏನು ಇದ್ದಾರೆ ಅವರು ೩೦ ಸಾವಿರದಿಂದ ಒಂದು ಲಕ್ಷ ರೂಪಾಯಿವರೆಗೂ ಒಂದೇ ರಾತ್ರಿಯಲ್ಲಿ ಜೂಜಾಡಿ ಕಳೆದುಕೊಳ್ಳುತ್ತಾರೆ ಎಂದು ಅಂದರೆ ಅರ್ಥ ಈ ಏನು ಶಾಸಕರು ಇಲ್ಲಿ ಹೋಗುವವರು ಕೆಟ್ಟವರಿದ್ದಾರೆಂದು ಮುಖ್ಯ ಮಂತ್ರಿಗಳು ಹೇಳಿದರೆ ಅವರ ಮಂತ್ರಿಮಂಡಲದಲ್ಲೂ ಕೆಟ್ಟ ಜನರಿದ್ದಾರೆ ಎಂಬ ಅಭಿಪ್ರಾಯವನ್ನು ಅವರು ಹೇಳಿದರು ಇವರು ಇಲ್ಲವೆಂದು ಹೇಳುತ್ತಾರೆ. ಬಹಿರಂಗವಾಗಿ ಸ್ಟೇಟ್‌ಮೆಂಟ್‌ಅನ್ನು ಅವರು ಕೊಟ್ಟಿದ್ದಾರೆ ಪ್ರೆಸ್ ಸ್ಟೇಟ್‌ಮೆಂಟ್ ಅನ್ನು ಇವರೂ ಕೂಡ ಕೊಟ್ಟಿದ್ದಾರೆ. ಈಗ ಇವತ್ತು ಟ್ವಿಸ್ಟ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳತಕ್ಕಂಥಾದ್ದು ಏನೆಂದರೆ, ಮಾನ್ಯ ಲಕ್ಷ್ಮೀಸಾಗರ್‌ರವರು ಇದು ರಿಸೆಂಟ್ ಅಕ್ಕರೆನ್ಸ್ ಅಲ್ಲವೆಂದು ಹೇಳಿದರು ಹೌದು ೨೧ನೇ ತಾರೀಖು ಏಪ್ರಿಲ್‌ಗೆ ಮಾನ್ಯ ಮುಖ್ಯ ಮಂತ್ರಿಗಳು ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಮೇಲೆ ೨೧ಕ್ಕೆ ಇದು ಬಂತು. ಅದು ಕೌಂಟರ್ ಆಗಿ ಮಲೈಮಹದೇಶ್ವರ ಬೆಟ್ಟದಲ್ಲಿ ಮಾನ್ಯ ದೇವೇಗೌಡರವರು ಕೊಟ್ಟರು. ನಂತರ ಅವರು ಜೂನ್ ೫ ರಲ್ಲಿ ಕುಣಿಗಲ್‌ನಲ್ಲಿ ಭಾಷಣ ಮಾಡುವಾಗ ಸದಸ್ಯರನ್ನು ಕುರಿಸಿಕೊಂಡು ಇವರೆಲ್ಲರೂ ಕೂಡ ಬ್ರಿಗೇಡ್ ರೋಡ್‌ನಲ್ಲಿ ಇರತಕ್ಕಂತಹ ಶಾಸಕರು ಇವರಿಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಅನ್ನತಕ್ಕಂತಹ ಧಾಟಿಯಲ್ಲಿ ರೀತಿಯಲ್ಲಿ ಹೇಳಿದ್ದಾರೆ ಸ್ಪಷ್ಟವಾಗಿ ಅದು ಬಂದಿದೆ ಅವರ ಕಡೆ ಕೈ ಮಾಡಿ ತೋರಿಸಿದ್ದಾರೆ. ಇದು ರೀಸೆಂಟ್ ಅಕ್ಕರೆನ್ಸ್ ಕೂಡ ಇದೆ. ಸ್ಪೆಸಿಫಿಕ್ ಮ್ಯಾಟರ್ ಇದೆ. ಅಪಮಾನಕಾರಿಯಾದಂತಹ ರೀತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಅವರು ಅನ್‌ಕಂಡೀಷನಲ್ ಆಗಿ ಅಪಾಲಜಿ ಕೇಳಬೇಕು. ಅವರು ಏನಾದರೂ ಹೇಳಿದರೆ ನಾವು ಒಪ್ಪತಕ್ಕಂಥಾದ್ದು ಅಲ್ಲ. ಅವರ ಹೇಳಿಕೆಯ ಮೇಲೆ ದೇವೇಗೌಡರೂ ಸಹ ೨-೩ ಸಲ ಕೊಟ್ಟಿದ್ದಾರೆ. ತಾವು ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು. ಮಾನ್ಯ ಮುಖ್ಯ ಮಂತ್ರಿಗಳು ಏನು ಹಗುರವಾಗಿ ಮಾತನಾಡಿದ್ದಾರೆ ಶಾಸಕರ ಬಗ್ಗೆ ಅದಕ್ಕೆ ಅವರು ಅನ್ ಕಂಡೀಷನಲ್ ಅಪಾಲಜಿ ಕೇಳಬೇಕು.

ಅಧ್ಯಕ್ಷರು.—ಮಾನ್ಯ ದೇವೇಗೌಡರವರು ಪತ್ರ ಬರೆದಿದ್ದಾರೆ ಅದನ್ನು ಓದುತ್ತೇನೆ. ವಿಧಾನ ಸಭಾಧ್ಯಕ್ಷರಿಗೆ, ವಿಷಯ, ಈ ದಿವಸ ನಾನು ಮಲಯಮಹದೇಶ್ವರ ಬೆಟ್ಟದಲ್ಲಿ ಆಡಿದಂತಹ ಮಾತುಗಳ ಪತ್ರಿಕಾ ಹೇಳಿಕೆಯ ಬಗ್ಗೆ ವಿಧಾನ ಸಭೆಯಲ್ಲಿ ಹಕ್ಕುಚ್ಯುತಿ ನಿರ್ಣಯ ಮಂಡಿಸಲು ಪ್ರಯತ್ನ ನಡೆದಿದೆ ಎಂಬುದರ ಬಗ್ಗೆ, ಈ ವಿಷಯದ ಬಗ್ಗೆ ಈ ಕೆಳಕಂಡ ವಿವರಣೆ ಕೊಡಬಯಸುತ್ತೇನೆ ನಾನು ಯಾವ ವಿಷಯವನ್ನೂ......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರೇ ಬಂದು ಹೇಳಲಿ. He is very much a sitting Member of this House.

SRI M. VEERAPPA MOILY.—We object for such reading. He is a Member of this House. If you read, it becomes a property of this House.

(ಗೊಂದಲ)

ಅಧ್ಯಕ್ಷರು.—ನನಗೆ ಪತ್ರ ಬರೆದಿದ್ದಾರೆ. I am also the property of this House,

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರೇ ಬಂದು ಹೇಳಲಿ.

(ಗೊಂದಲ)

ಅಧ್ಯಕ್ಷರು.—ಅವರು ಬರೆದಿದ್ದನ್ನು ನಾನು ಹೇಳಬೇಕಾಗುತ್ತದೆ. ಯಾವ ವಿಷಯ ಪ್ರಜಾವಾಣಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿದೆ ಆ ವಿಷಯದ ಬಗ್ಗೆ ಅದೇ ದಿವಸ ಅದನ್ನು ನಿರಾಕರಣೆ ಮಾಡಿ ಹೇಳಿಕೆ ಕೊಟ್ಟಿದ್ದೇನೆ......

(ಗೊಂದಲ)

SRI M. VEERAPPA MOILY.—It is very wrong principle to read out the letter of Sri H. D. Devegowda,

(Interruption)

SRI M. VEERAPPA MOILY.— Sir, I rise to a point of order,

ಅಧ್ಯಕ್ಷರು.—ಯಾವುದಕ್ಕೆ ಪಾಯಿಂಟ್ ಆಫ್ ಆರ್ಡರ್ ?

ಶ್ರೀ ಎಂ. ವೀರಪ್ಪ ಮೊಯಿಲಿ.—Against reading the letter of Sri H.D. Deve gowda ಈಗ ತಾವು ಏನು ಒಂದು ಹೊಸ ನಮೂನೆಯನ್ನು ಈ ಸದನದಲ್ಲಿ ಮಂಡಿಸುತ್ತಿದ್ದೀರಿ, ಇನ್ನು ಮುಂದೆ ನಾವೂ ಕೂಡಾ ಏನಾದರೂ ನಮ್ಮ ಸಮಸ್ಯೆಗಳು ಇದ್ದರೆ ಹೊರಗಿನಿಂದ ಕಾಗದ ಬರೆಯುತ್ತೇವೆ. He is very very much a member of this House. Has he applied for leave. ? They may take liberty to write to you and you will have to read that letter. ಮೊದಲಿಗೆ ಇದನ್ನು ತಾವು ಒಪ್ಪುತ್ತೀರಾ ? He is a sitting Member of this House. It is a disrespect to the Speaker to write a letter like that. It is a disrespect to the Chair and to the House.

ಅಧ್ಯಕ್ಷರು.— ತಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಹೇಳಿ ?

ಶ್ರೀ ಎಂ, ವೀರಪ್ಪ ಮೊಯಿಲಿ.— ಈ ಸದನದ ನಿಯಮಗಳಿಗೆ ಇದು ಅನುಸಾರವಾಗಿಲ್ಲ ತಾವು ಓದತಕ್ಕಂಥದ್ದು. ಸನ್ಮಾನ್ಯ ದೇವೇಗೌಡರು ಈ ಸಭೆಯ ಸದಸ್ಯರಾಗಿದ್ದಾರೆ. ಇದರಿಂದ ಮುಂದೆ ಕೆಲವು ತಪ್ಪು ಪ್ರಿಸಿಡೆಂಟ್‌ಗೆ ತಾವು ಅನುವು ಮಾಡಿಕೊಟ್ಟ ಹಾಗೆ ಆಗುತ್ತದೆ. ಇದರಿಂದ ಬಹಳ ಅನಾಹುತವಾಗುತ್ತದೆ, ದಯಮಾಡಿ ಕೆಟ್ಟ ಸಂಪ್ರದಾಯ ಈ ಸದನದಲ್ಲಿ ಬಾರದ ಹಾಗೆ ನೋಡಿಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.— ಯಾರಾದರೂ ಸದನದಲ್ಲಿ ಈ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವಾಗ ಯಾವುದೋ ಒಂದು ಹೇಳಿಕೆ ಬಂದಿದೆ ಎಂದು ಎನ್ನುವಂಥದ್ದನ್ನು ತೆಗೆದುಕೊಂಡು ಬಂದು ಇದೇ ಸತ್ಯ ಎಂದು ಹೇಳಿ ಪುರಾವೆಯನ್ನು ಮಾಡುವಂಥ ಪ್ರಯತ್ನವನ್ನು ಮಾಡಿ ಹೇಳಿಕೆಯನ್ನು ಕೊಟ್ಟಲ್ಲಿ

ಸೌಜನ್ಯಕ್ಕೋಸ್ಕರವಾಗಿಯಾದರೂ ಈ ರೀತಿ ಸದನದ ಗಮನಕ್ಕೆ ತರತಕ್ಕಂಥ ಪ್ರಯತ್ನವನ್ನು ಮಾಡುವುದಿಲ್ಲ. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ, ದೇವೇಗೌಡರು ಕೊಳ್ಳೇಗಾಲದಲ್ಲಿ ಮಾತನಾಡಿದರು ಎಂದು ಹೇಳಿದ್ದಾರೆ. ಆದರೆ ಕೊಳ್ಳೇಗಾಲದಲ್ಲಿ ಇಂಥ ಪತ್ರಿಕಾ ಹೇಳಿಕೆಯನ್ನೇ ಕೊಟ್ಟಿಲ್ಲ ಎಂದು ಮೂರನೇ ದಿವಸ ಮಹದೇಶ್ವರ ಬೆಟ್ಟದಿಂದ ದೇವೇಗೌಡರು ವಾಪಸ್ಸು ಬರುವಾಗ ಪತ್ರಕರ್ತರೊಂದಿಗೆ ಮಾತನಾಡಿದ್ದೇನೆ ಎನ್ನುವ ವಿಷಯದ ಬಗ್ಗೆ ಪ್ರಸ್ತಾಪ ಮಾಡಿರುವುದರಿಂದ ಇದರ ಬಗ್ಗೆ ನೀವು ಸದನದ ಗಮನವನ್ನು ಸೆಳೆಯಬೇಕಾದಂಥ ಅಗತ್ಯ ಇಲ್ಲ ಎಂದು ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ. ಅಂಥ ಹೇಳಿಕೆಯನ್ನು ಅವರು ಕೊಟ್ಟಿಲ್ಲ, ಯಾರೂ ಕೂಡಾ ಸದನವನ್ನು ತಪ್ಪು ದಾರಿಗೆ ಎಳೆಯತಕ್ಕಂಥದ್ದು ಮಾಡಬಾರದಾಗಿ ವಿನಂತಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರೇ ಬಂದು ಹೇಳಲಿ.

(ಗೊಂದಲ)

ಅಧ್ಯಕ್ಷರು.— ವೀರಪ್ಪ, ತಮ್ಮ ಪಾಯಿಂಟ್ ಆಫ್ ಆರ್ಡರ್.......

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.— ಈ ರೀತಿ ಕಾಗದ ಅವರೇನಾದರೂ ಪ್ರಕಾಶ್‌ರವರಿಗೆ ಬರೆದು ಡಿಬೇಟ್‌ನಲ್ಲಿ ನನಗೆ ಈ ರೀತಿ ಕಾಗದ ಬರೆದಿದ್ದಾರೆ ಎಂದು ಓದಿಕೊಂಡರೆ ನಮಗೆ ಅಭ್ಯಂತರ ಇಲ್ಲ. ನಾವು ಎತ್ತಿರತಕ್ಕಂಥ ವಿಷಯ ದೇವೇಗೌಡರ ಹೇಳಿಕೆ ಮೇಲಲ್ಲ. ಪ್ರಾಸಂಗಿಕವಾಗಿ ದೇವೇಗೌಡರು ಹೇಳಿದ್ದಾರೆಯೋ ಹೊರತು ಅವರ ಹೇಳಿಕೇನೆ ಸಬ್ಜೆಕ್ಟ್ ಮ್ಯಾಟರ್ ಅಲ್ಲ. ಪ್ರಿವಿಲೇಜ್‌ಗೆ ಎತ್ತಿರತಕ್ಕಂಥದ್ದು ಆದ್ದರಿಂದ ಅದರ ಮೇಲೆ ನಾವು ಹೇಳಿದ್ದರ ಮೇಲೆ ಯಾವುದಾದರೂ ಕ್ಲಾರಿಫೈ ಮಾಡುವುದಿದ್ದರೆ ನಾಳೆ ದಿವಸ ಬಂದು ಅವರೇ ಪರ್ಸನಲ್ ಎಕ್ಸ್‌ಪ್ಲನೇಷನ್ ತೆಗೆದುಕೊಂಡು ಹೇಳಬಹುದು. He has sent a letter to the Speaker to be read out at this juncture - the Speaker shall refuse to sub-serve the interest of Mr. Devegowda like this.

ಶ್ರೀ ಎಂ. ಪಿ. ಪ್ರಕಾಶ್.— ಪ್ರಾಸಂಗಿಕವಾಗಿ ಕೂಡಾ ಅರ್ಧ ಸತ್ಯವನ್ನು ಪೂರ್ಣವಾಗಿ ಸುಳ್ಳು ಹೇಳುವಂಥದ್ದಕ್ಕೆ ಅಧಿಕಾರ ಇಲ್ಲ. ಯಾವುದೋ ಒಬ್ಬ ಸದಸ್ಯರು ಈ ಅನುಸಂಗಿಕವಾಗಿ ಹೇಳತಕ್ಕಂಥದ್ದು ಕೂಡಾ ಸಂಪೂರ್ಣವಾಗಿ ಜವಾಬ್ದಾರಿಯನ್ನು ತೆಗೆದುಕೊಂಡು ಹೇಳಬೇಕಾಗುತ್ತದೆ.

SRI M. MALLIKARJUNA KHARGE.— It is known to everyone.

(ಗೊಂದಲ)

SRI K. H. SRINIVAS.— Hon Speaker is not an assistant to Devegowda Speaker is the property of this House.

(Interruption)

ಅಧ್ಯಕ್ಷರು.— ನೋಡಿ, ಅವರು ಅಸಿಸ್ಟೆಂಟ್ ಎಂದು ಬರೆದಿಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಮೊದಲ ದಿವಸ ಹೇಳಿಕೆ ಕೊಳ್ಳೇಗಾಲದಿಂದ ಬಂತು. ಅದನ್ನು ನಿರಾಕರಣೆ ಮಾಡುವಂಥ ಹೇಳಿಕೆ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ನೀವು ಬೇಕಾದರೆ ಪಾಯಿಂಟ್‌ಔಟ್ ಮಾಡಿ...

(ಗೊಂದಲ)

ಅಧ್ಯಕ್ಷರು.— ಬೊಮ್ಮಾಯಿಯವರೇ ತಾವು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ತಪ್ಪು ವರದಿಯಾದಾಗ ಅದನ್ನು ನಿರಾಕರಣೆ ಮಾಡಿದ ಮೇಲೆ ಮತ್ತೊಂದಂ ಅಭಿಪ್ರಾಯವನ್ನು ಉಚ್ಚಾರ ಮಾಡುವುದು...

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.— ಅಧ್ಯಕ್ಷರೇ,......

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ನೀವು ಲೇಟೆಸ್ಟ್ ಆಗಿ ಹೇಳುತ್ತಿದ್ದೀರಿ. ನೀವು ಕೋಟ್ ಮಾಡುವಾಗ ಅದೇನಾದರೂ ಪತ್ರಿಕೆಯಲ್ಲಿ ಬಂದಿದ್ದರೆ ಅದನ್ನು ಡಿನೈ ಮಾಡಿದ್ದರೆ ಅದನ್ನು ಕೋಟ್ ಮಾಡತಕ್ಕಂಥ ಅಧಿಕಾರ ನಮಗೆ ಇಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಮನೆಯಲ್ಲಿ, ಸಭೆಯಲ್ಲಿ ಮಾತನಾಡತಕ್ಕಂಥ ವಿಚಾರ ಅಲ್ಲ. ಪತ್ರಿಕೆಯಲ್ಲಿ ಒಂದು ವಿಚಾರ ವ್ಯಕ್ತವಾಗಿದೆ. ಅದನ್ನು ಅವರು ಡಿನೈ ಮಾಡಿದ್ದಾರೆ.

(ಗೊಂದಲ)

SRI M. VEERAPPA MOILY.— Why should he shy of facing this House.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಆದ್ದರಿಂದಲೇ, ಸ್ಪೀಕರ್‌ರವರು ಆ ಕಾಗದವನ್ನು ಓದುವ ಅಗತ್ಯ ಇಲ್ಲ ನಿಮ್ಮ ಪ್ರಕಾರ.

ಶ್ರೀ ಎಸ್. ಆರ್. ಬೊಮ್ಮಾಯಿ.— ಯಾವಾಗ ಹೇಳಿದ್ದಾರೆ, ಇವರು ಅರ್ಧ ಸತ್ಯ ಹೇಳಿದ್ದಾರಲ್ಲಾ, ದೇವೇಗೌಡರ ಹೇಳಿಕೆಯನ್ನು ಅರ್ಧ ಓದಿದಿರಿ, ಅದನ್ನು ಡಿನೈ ಎಂದು ಹೇಳಲಿಲ್ಲ ನೀವು.

(ಗೊಂದಲ)

ಇವರು ಅರ್ಧ ಸತ್ಯ ಹೇಳಿದ್ದಾರೆ. ಡಿನೇಯಿಂಗ್ ಹೇಳಿಕೆಯನ್ನು ಏಕೆ ಹೇಳಲಿಲ್ಲ. ಸಬ್ ಸೀಕ್ವೆಂಟ್ ಡಿನೇಯಲ್ ಆದಮೇಲೆ ಅದಕ್ಕೆ ಅರ್ಥ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಬ್ರಿಗೇಡ್‌ರೋಡ್ ಶಾಸಕರು ಎಂದು ಬೊಟ್ಟು ಮಾಡಿ ತೋರಿಸಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಒಬ್ಬ ಸದಸ್ಯರು ಪತ್ರ ಬರೆದಿದ್ದಾರೆ. ದೇವೇಗೌಡರು ಇಲ್ಲಿ ಹಾಜರು ಇಲ್ಲ, ಇದ್ದರೆ ಅವರು ಹೇಳಬೇಕಿತ್ತು, ಅವರು ಅಬ್ಸೆಂಟ್ ಇದ್ದರೆ ಯಾರು ಹೇಳಬೇಕು ?

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇಂತಹ ಅರ್ಜೆಂಟ್ ಇದ್ದರೆ ಅವರು ಏನೇನು ಹೇಳಬೇಕೋ ಅದನ್ನು ಸ್ಪೀಕರ್ ಅವರು ಹೇಳುವುದಕ್ಕಾಗುವುದಿಲ್ಲ. How can you expect the Speaker to say all those things. ನಾಳೆ ನಾನು ಅಬ್ಸೆಂಟ್ ಇರುತ್ತೇನೆ, ಏನೇನು ನಾನು ಹೇಳಬೇಕೋ ಅದನ್ನೆಲ್ಲಾ ಬರೆದು ಕಳಿಸಿದರೆ ಅದನ್ನು ಇವರು ಓದುತ್ತಾರೋ ? Don't denigrate the position of the Speaker.

ಅಧ್ಯಕ್ಷರು. ವೀರಪ್ಪ ಮೊಯಿಲಿಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ವೀರಪ್ಪ ಮೊಯಿಲಿಯವರು ಸ್ಟೇಟ್ ಸಬ್ಜೆಕ್ಟ್ ಮೇಲೆ ಮಾಡಿದ್ದಾರೆ, ನಾನು ಹೇಳಿದ್ದುದು, ಪಾಯಿಂಟ್ ಆಫ್ ಆರ್ಡರ್ ಅವರು ರೈಸ್ ಮಾಡಿದ್ದುದು...

ಅಧ್ಯಕ್ಷರು.—ಮುಂದೆ ನೋಡೋಣ, ಇದಕ್ಕೆ ಮೊದಲು ರೂಲಿಂಗ್ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೊಡುವುದಕ್ಕಿಂತ ಮುಂಚೆ ೩-೪ ಜನ ಸಿಗ್ನೇಚರ್ ಮಾಡಿದ್ದಾರೆ, ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು.— ಈಗ ವೀರಪ್ಪ ಮೊಯಿಲಿ ಅವರ ವಿ‍ಯು ನೋಡೋಣ. ವಿಚಾರ ಮಾಡುತ್ತೇನೆ. ತಾವು ಕೂಡಿ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾರು ರಂಜು ಮಾಡಿದ್ದಾರೆ, ಅವರಿಗೆ ಅವಕಾಶ ಕೊಡಿ

ಅಧ್ಯಕ್ಷರು.—ಅವಕಾಶ ನೋಡುತ್ತೇನೆ. ಈಗ ವೀರಪ್ಪ ಮೊಯಿಲಿ ಅವರು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದಕ್ಕೆ ಉತ್ತರ ಹೇಳುತ್ತೇನೆ, ಹೆಚ್. ಡಿ. ದೇವೇಗೌಡ ವಿಧಾನ ಸಭಾ ಸದಸ್ಯರು, ಬೆಂಗಳೂರು ದಿನಾಂಕ ೮.೬.೮೮, ಗೌರವಾನ್ವಿತ ವಿಧಾನಸಭಾ ಅಧ್ಯಕ್ಷರಲ್ಲಿ ''ವಿಷಯ''...

(ಗೊಂದಲ)

ಅಧ್ಯಕ್ಷರು.— ಕೇಳಿರಿ,...'ವಿಷಯ ನಾನು ಈ ದಿವಸ ಮಹದೇಶ್ವರ ಬೆಟ್ಟದಲ್ಲಿ ಮಾಡಿದನೆಂಬಾ ಪತ್ರಿಕಾ ಹೇಳಿಕೆಯ ಬಗ್ಗೆ ವಿಧಾನ ಸಭೆಯಲ್ಲಿ ಹಕ್ಕುಬಾಧ್ಯತಾ ನಿರ್ಣಯವನ್ನು ಮಂಡಿಸಲು ಪ್ರಯತ್ನ ನಡೆದಿದೆ ಎಂಬುದರ ಬಗ್ಗೆ...

(ಗೊಂದಲ)

ವೀರಪ್ಪ ಮೊಯಿಲಿಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಇದರ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅದನ್ನು ಓದುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ವಿಧಾನ ಸಭಾ ಅಧ್ಯಕ್ಷರು ಅಂತ ಬರೆದಿದ್ದಾರೆ, ನೋಡಿ ಇದನ್ನು ಮುಚ್ಚಿಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಪಾಯಿಂಟ್ ಆಫ್ ಆರ್ಡರ್...

(ಗೊಂದಲ)

ಅಧ್ಯಕ್ಷರು.—ನೋಡಿ ಇದರಲ್ಲಿ ಬಿ. ಜಿ. ಬಣಕಾರ್ ಎಂದು ಬರೆದಿಲ್ಲ. ಮಾನ್ಯ ದೇವೇಗೌಡರು ಹೇಳಿದ್ದಾರೆ ''ಈ ವಿಷಯದ ಬಗ್ಗೆ ನಾನು ಈ ಕೆಳಕಂಡ ವಿವರಣೆಯನ್ನು ಕೊಡಬಯಸುತ್ತೇನೆ.

ಯಾವ ವಿಷಯ ಪ್ರಜಾವಾಣಿ ಹಾಗೂ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾಯಿತೋ ಅದೇ ದಿವಸ ಅದೇ ವಿಷಯದ ಬಗ್ಗೆ ನಾನು ನಿರಾಕರಣೆ ಮಾಡಿ ಹೇಳಿಕೆ ಕೊಟ್ಟಿದ್ದೇನೆ. ನನ್ನ ನಿರಾಕರಣೆಯ ಹೇಳಿಕೆಯನ್ನು ಕೂಡ ತಮ್ಮ ಗಮನಕ್ಕೆ ತರಲು ಲಗತ್ತಿಸಿದ್ದೇನೆ.

ಆದ್ದರಿಂದ ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಕೊಡಬಾರದೆಂದು ವಿನಂತಿ ಮಾಡುತ್ತೇನೆ. ''Gowda denies the Report'' ಆದುದರಿಂದ ವೀರಪ್ಪ ಮೊಯಿಲಿಯವರು ಪಾಯಿಂಟ್ ಆಫ್ ಆರ್ಡರ್ ಏನು ಇದೆ ಅದನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— It is a proxy going on here–. ಈ ತರಹ ಮಾಡಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.— ಕ್ರಿಯಾಲೋಪವನ್ನು ಮಂತ್ರಿಗಳು ಏನು ಎತ್ತಿದ್ದಾರೆ ಅದನ್ನು ನಾನು ಎತ್ತಿ ಹಿಡಿದಿದ್ದೇನೆ. ಎರಡೂ ಕಡೆಯ ವಾದವನ್ನು ಕೇಳಿದ ನಂತರ ನಾನು ಇವರ ಕ್ರಿಯಾಲೋಪವನ್ನು ಎತ್ತಿ ಹಿಡಿದಿದ್ದೇನೆ. ನಿಮ್ಮ ಕ್ರಿಯಾಲೋಪವನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಕೇಳುವುದು, ಇನ್ನೂ ೩-೪ ಜನ ಮಾತನಾಡುವವರು ಇದ್ದಾರೆ, ಅವರಿಗೆ ಅವಕಾಶ ಕೊಡಿ ಎಂದು ಕೇಳಿದಾಗ ಆಮೇಲೆ ಕೊಡುತ್ತೇನೆ ಎಂದು ಹೇಳಿದಿರಿ...

(ಗೊಂದಲ)

ಅಧ್ಯಕ್ಷರು.—ನಾನು ನಿರಾಕರಣೆ ಮಾಡಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ, ನಾನು ರೂಲಿಂಗ್ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು.— ಇವರ ಕ್ರಿಯಾಲೋಪವನ್ನು ಎತ್ತಿ ಹಿಡಿದಿದ್ದೇನೆ. ನಿಮ್ಮ ಕ್ರಿಯಾಲೋಪವನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರದ ಧೋರಣೆ ಮಾನ್ಯ ಶಾಸಕರುಗಳನ್ನು ಅವಮಾನ ಮಾಡತಕ್ಕ...

ಅಧ್ಯಕ್ಷರು.— ರೂಲಿಂಗ್ ಕೊಟ್ಟು ಆಗಿದೆ Nothing will be recorded.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಾಸಕರುಗಳಿಗೆ ಅವಮಾನ ಮಾಡತಕ್ಕ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ, ಸದನದ ಗೌರವಗಳಿಗೆ ಚ್ಯುತಿ ತರತಕ್ಕಂಥ ಕೆಲಸವನ್ನು ಮಾಡಿದ್ದಾರೆ ಮತ್ತು Unconditional apology...ಕೇಳಿ ಅಂದರೆ ಇಲ್ಲವೆಂದು ಹೇಳುತ್ತಿದ್ದಾರೆ, ಅವರ ವರ್ತನೆಯನ್ನು ಪ್ರತಿಭಟಿಸಿ, ಖಂಡಿಸಿ ಅವರು ಹೇಳಿಕೆ ಕೊಟ್ಟಿದ್ದಕ್ಕಾಗಿ ನಾವು ಸಭೆಯಿಂದ ವಾಕ್-ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್-ಐ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಗಮನ ಸೆಳೆಯುವ ಸೂಚನೆ

೧) ರೋಣ ತಾಲ್ಲೂಕು ನಿಡಗುಂದಿ ಗ್ರಾಮದಲ್ಲಿ ವಿದ್ಯುತ್ ತಂತಿ ಬಿದ್ದು ೩ ಜನ ಸಾವಿಗೀಡಾಗಿರುವ ಬಗ್ಗೆ

ಶ್ರೀ ಚನ್ನಬಸದೇವ ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಬಿದ್ದ ಮಳೆ ಗಾಳಿಯಿಂದ ರೋಣ ತಾಲ್ಲೂಕು ನಿಡಗುಂದಿ ಗ್ರಾಮದಲ್ಲಿ ವಿದ್ಯುತ್ ತಂತಿ ಬಿದ್ದು ಮೂರು ಜನರು ಸಾವಿಗೀಡಾಗಿರುವ ಬಗ್ಗೆ ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ,

ದಿನಾಂಕ ೩–೫–೧೯೮೮ರ ರಾತ್ರಿ ೧೦ ಘಂಟೆಯ ಸಮಯದಲ್ಲಿ ನಿಡಗುಂದಿ ಗ್ರಾಮದ ಸುತ್ತ ಮುತ್ತ ಭಾರಿ ಗುಡುಗು, ಮಿಂಚು ಮತ್ತು ಸುರಿಮಳೆಯಾಯಿತು. ಆಗ ನಿಡಗುಂದಿ ಗ್ರಾಮದ ಹೆಣ್ಣು ಮಕ್ಕಳ ಶಾಲೆಯ ಆವರಣದಲ್ಲಿ ೪೦೦ ವೋಲ್ಟೇಜ್ ಲೈನಿನ ತಂತಿಯೊಂದು ಕಡಿದು ಭೂಮಿ ಮೇಲೆ ಬಿದ್ದಿತು. ಭಾರಿ ಮಳೆಯ ಕಾರಣ ಶಾಲಾ ಆವರಣದಲ್ಲಿ ನೀರು ನಿಂತಿದ್ದು ಕಡಿದು ಬಿದ್ದ ತಂತಿ ನೀರಿನಲ್ಲಿ ಮುಳುಗಿತ್ತು. ಹೀಗೆ ಬಿದ್ದಿದ್ದ ತಂತಿಯನ್ನು ದಾಟಲು ಹೋದ ಒಂದು ವ್ಯಕ್ತಿಗೆ ವಿದ್ಯುತ್ ಅಪಘಾತ ಉಂಟಾಯಿತು. ಈ ಅಪಘಾತಕ್ಕೊಳಗಾದ ವ್ಯಕ್ತಿಯನ್ನು ರಕ್ಷಿಸಲು ಅವರ ನೆರವಿಗೆ ಬಂದ ಇನ್ನು ಇಬ್ಬರು ವ್ಯಕ್ತಿಗಳಿಗೂ ವಿದ್ಯುತ್ ಅಪಘಾತ ಉಂಟಾಗಿ ಈ ಮೂವರು ಅಸು ನೀಗಿದರು. ಆದರೆ ರಕ್ಷಣೆಗೆ ಹೋದ ಇನ್ನೊಂದು ವ್ಯಕ್ತಿಗೆ ಸುಟ್ಟಗಾಯಗಳಾಗಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಗುಣಮುಖರಾಗುತ್ತಿದ್ದಾರೆ. ಹೀಗಾಗಿ ಅಪಘಾತದಲ್ಲಿ ೩ ಜನ ಸತ್ತಿದ್ದು ಒಬ್ಬರಿಗೆ ಸುಟ್ಟ ಗಾಯಗಳಾದವು ಈ ೪ ಜನರು ಸಾರ್ವಜನಿಕರು.

ಗಾಳಿ ಮಳೆ ಭಾರಿಯಾಗಿದ್ದುದರಿಂದ ತಂತಿ ಜೋರು ಹೊಡೆದು ತುಂಡಾಯಿತು. ಹೀಗೆ ತುಂಡಾದ ಕೂಡಲೇ ನೆಲದ ಮೇಲೆ ಬಿದ್ದಿತು ಆದರೆ ತಂತಿಯಲ್ಲಿ ವಿದ್ಯುತ್ ಪ್ರವಾಹವಿದ್ದುದರಿಂದ ಮೇಲ್ಕಂಡ ಅಪಘಾತ ಉಂಟಾಯಿತು. ವಿದ್ಯುತ್ ತಂತಿ ಕಡಿದುದು ಅನಿರೀಕ್ಷಿತ ಮುಂಗಾರಿನ ಮುಂಚೆ ವಿದ್ಯುತ್ ಮಾರ್ಗಗಳ ತಪಾಸಣೆ ಮಾಡಲಾಗುತ್ತಿದೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)